ಸಂಪುಟ 01 । ಸಂಚಿಕೆ 17 । ಗುರುವಾರ 27 ನವೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ರಾಷ್ಟ್ರೀಯ ಸಂಚಾರ ನಿಯಂತ್ರಣ ದಿನ (Traffic Control Day): ಸಂಚಾರ ಸುರಕ್ಷತೆ ಮತ್ತು ಜಾಗೃತಿ ಮೂಡಿಸಲು ಕೆಲವೆಡೆ ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

'ಹಣ್ಣುಗಳಿಂದ ಒಡಗೂಡಿದ ಮರವು
ಯಾವಾಗಲೂ ಬಗ್ಗಿರುತ್ತದೆ. ನೀನು
ಉನ್ನತ ವ್ಯಕ್ತಿ ಆಗಬೇಕಾದರೆ
ವಿನಯಸಂಪನ್ನನಾಗಿರು ಮತ್ತು

ರಾಮಕೃಷ್ಣ ಪರಮಹಂಸ

# ಬಿಜೆಪಿ ಆಡಳಿತವಿರುವ ರಾಜ್ಯಗಳು 'ಕರ್ನಾಟಕ ಮಾದರಿ'ಯನ್ನು ಅನುಸರಿಸುತ್ತಿವೆ: ಸಿಎಂ ಸಿದ್ದರಾಮಯ್ಯ



ಚಿಕ್ಕಬಳ್ಳಾಪುರ: ಎಲ್ಲಾ ಜಿಲ್ಲೆಗಳಲ್ಲಿ ಅಭಿವೃದ್ಧಿಯೊಂದಿಗೆ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಐದು ಗ್ಯಾರಂಟಿ ಯೋಜನೆ 'ಕರ್ನಾಟಕ ಮಾದರಿ'ಯನ್ನು ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಅನುಸರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೇಳಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನಡೆದ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆ, ಹೆಚ್.ಎನ್.ವ್ಯಾಲಿ 3ನೇ ಹಂತದಲ್ಲಿ 164 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಲೋಕಾರ್ಪಣೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರು. 1 ಲಕ್ಷ ಕೋಟಿ ರೂ. ಮೌಲ್ಯದ ಅಭಿವೃದ್ಧಿ ಕಾರ್ಯಗಳ ಮೂಲಕ ಬಿಜೆಪಿಯ ಸುಳ್ಳು ಆರೋಪಕ್ಕೆ ನಾವು ಉತ್ತರಿಸಿದ್ದೇವೆಂದು ಹೇಳಿದರು. ಶಿಡ್ಲಘಟದಲ್ಲಿ ಉದ್ಘಾಟನೆಯಾದ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯಿಂದಾಗಿ ಇಡೀ ರಾಜ್ಯದ ರೇಷ್ಮೆ ಬೆಳೆಗಾರರಿಗೆ ಅನುಕೂಲ ಆಗಲಿದೆ. ಶಿಡ್ಲಘಟ್ಟ ಕ್ಷೇತ್ರದಲ್ಲಿ ಇಷ್ಟು ದೊಡ್ಡ ಮೊತ್ತದ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸುತ್ತಿರುವುದು ನಮ್ಮ ಸರ್ಕಾರದ ಅಭಿವೃದ್ಧಿ ಪರ್ವದ ವೇಗವನ್ನು ತೋರಿಸುತ್ತಿದೆ.

ನಾವು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದೇವೆ. ಗ್ಯಾರಂಟಿ ಕಾರ್ಯಕ್ರಮಗಳಿಗೆ ಒಂದು ಲಕ್ಷ ಕೋಟಿಗೂ ಅಧಿಕ ಮೊತ್ತದ ಹಣ ಇದುವರೆಗೂ ತೆಗೆದಿಟ್ಟಿರುವುದು ಮಾತ್ರವಲ್ಲದೆ, ಇಷ್ಟೇ ಮೊತ್ತದ ಅಭಿವೃದ್ಧಿ ಕಾರ್ಯಗಳನ್ನೂ ನಾವು ನಡೆಸುತ್ತಿದ್ದೇವೆ. ಇದಕ್ಕೆ ಇಂದು ಇಲ್ಲಿ ಉದ್ಘಾಟನೆಗೊಂಡ ಅಭಿವೃದ್ಧಿಯೂ ಸೇರಿದೆ ಎಂದು ತಿಳಿಸಿದರು. ಸರ್ಕಾರದ ಬಳಿ ಹಣ ಇಲ್ಲ, ಖಜಾನೆ ಖಾಲಿ ಆಗಿದೆ ಎನ್ನುವ ಬಿಜೆಪಿಯ ಸುಳ್ಳು ಆರೋಪಗಳಿಗೆ ನಮ್ಮ ಸರ್ಕಾರ ಅಭಿವೃದ್ಧಿ ಕಾರ್ಯಗಳ ಮೂಲಕವೇ ಉತ್ತರ ಕೊಟ್ಟಿದೆ.

ರಾಜ್ಯದ ಪ್ರತೀ ಕುಟುಂಬಗಳಿಗೂ ಪ್ರತೀ ತಿಂಗಳು ಸರ್ಕಾರದ ಹಣ ಮತ್ತು ಕಾರ್ಯಕ್ರಮಗಳು ತಲುಪುತ್ತಿವೆ. ನಮ್ಮ ಸರ್ಕಾರ ಅಧಿಕಾರದಲ್ಲಿ ಇರುವವರೆಗೂ ಯಾವ ಗ್ಯಾರಂಟಿ ಯೋಜನೆಗಳೂ ನಿಲ್ಲುವುದಿಲ್ಲ. ಜೊತೆಗೆ ಸಣ್ಣ ನೀರಾವರಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿ ನಡೆಸುತ್ತಿದ್ದೇವೆ. ಶಿಡ್ಲಘಟ್ಟಕ್ಕೆ ಮಿನಿ ವಿಧಾನಸೌಧ ಬೇಕು ಎನ್ನುವುದೂ ಸೇರಿದಂತೆ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಸಿ.ಸುಧಾಕರ್ ಮತ್ತು ಕ್ಷೇತ್ರದ ಶಾಸಕರು ಬೇಡಿಕೆ ಇಟ್ಟಿದ್ದಾರೆ. ಸಚಿವರ ಮನವಿಯಂತೆ ಎಲ್ಲಾ ಕಾಮಗಾರಿಗಳಿಗೂ ಅನುದಾನ ನೀಡಲಾಗುವುದು. ಬಿಜೆಪಿಗೆ ರಾಜ್ಯದ ಜನ ಅಧಿಕಾರ, ಅವಕಾಶ ಕೊಟ್ಟಾಗ ಅಭಿವೃದ್ಧಿ ಕೆಲಸಗಳನ್ನು ಮಾಡಲಿಲ್ಲ. ಒಂದೇ ಒಂದು ಮನೆಯನ್ನೂ ಇಡೀ ಸರ್ಕಾರದ ನಾಲ್ಕು ವರ್ಷಗಳ ಅವಧಿಯಲ್ಲಿ ಬಿಜೆಪಿ ವಿತರಣೆ ಮಾಡಲಿಲ್ಲ.

## ಸಚಿವ ಎಚ್.ಕೆ. ಪಾಟೀಲ್ ರಿಗೆ ಸಿಎಂ ಸ್ಥಾನ ನೀಡಲು ರೈತ ಸಂಘದ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಮುಂದಿನ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಕೋಳೂರು ಅವರು ಆಗ್ರಹಿಸಿದ್ದಾರೆ.

ಮಂಗಳವಾರ ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು " ಎಚ್.ಕೆ. ಪಾಟೀಲ್ ರೈತರ ಪರವಾಗಿ ದೀರ್ಘಕಾಲ ಸೇವೆ ಸಲ್ಲಿಸುತ್ತಿದ್ದು,



ಮುಂಗಾರು ಮಳೆಯ ಸಂದರ್ಭದಲ್ಲಿ ಮುಡ ಬಿತ್ತನೆ, ಶುದ್ಧ ನೀರಿನ ಘಟಕಗಳ ಸ್ಥಾಪನೆ, ಮೆಕ್ಕೆಜೋಳ ಬೆಂಬಲ ಬೆಲೆ ಖರೀದಿ ಕೇಂದ್ರಗಳು ಮತ್ತು ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತಹ ಪ್ರಮುಖ ಕಾರ್ಯಗಳಲ್ಲಿ ನೇರವಾಗಿ ಭಾಗವಹಿಸಿದ್ದಾರೆ. ಅವರ ಪ್ರಾಮಾಣಿಕತೆ, ಪರಿಶ್ರಮ ಮತ್ತು ರೈತರ ಹಿತಚಿಂತನೆಯನ್ನು ಗಮನದಲ್ಲಿಟ್ಟುಕೊಂಡು, ಅವರಿಗೆ ಸಿಎಂ ಸ್ಥಾನ ನೀಡುವುದು ನ್ಯಾಯಸಮ್ಮತವಾಗಿದೆ ಎಂದು ರೈತ ಸಂಘ ಒತ್ತಾಯಿಸಿದೆ. ಒಂದು ವೇಳೆ ಸಿ. ಎಂ ಸ್ಥಾನ ಕೊಡದೆ ಹೋದರೆ ಸರಿಯಾದ ಕ್ರಮ ಕೈಗೊಳ್ಳದಿದ್ದರೆ ಕೊಪ್ಪಳ ಹಾಗೂ ಗದಗ ಜಿಲ್ಲಾ ರೈತ ಸಂಘಗಳು ಪ್ರತಿಭಟನೆ ನಡೆಸುವುದಕ್ಕೆ ತಯಾರಾಗಿವೆ ಎಂದಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ನೀರಿನ ವಿಷಯದಲ್ಲಿ ರಾಜಕಾರಣ ಮಾಡಬಾರದು ಶಾಸಕ ಹಂಪನಗೌಡ ಬಾದರ್ಲಿ




❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನ.26- ನೀರಿನ ವಿಷಯದಲ್ಲಿ ಉದ್ದೇಶಪೂರ್ವಕವಾಗಿ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಜಿ ಸಚಿವ ವೆಂಕಟರಾವ್ ನಾಡಗೌಡರು ಮಾಡುತ್ತಿರುವುದು ಎಷ್ಟು ಸರಿ ಎಂದು ಶಾಸಕ ಹಂಪನಗೌಡ ಬಾದರ್ಲಿ ಪ್ರಶ್ನಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.ಬೇಸಿಗೆ ಬೆಳೆಗೆ ನೀರು ಬಿಡಿಸಲು ಮುತ್ತಿಗೆ ಹಾಕುತ್ತೇನೆನ್ನುವ ಮಾಜಿ ಸಚಿವರೆ ನಿಮ್ಮಿಂದ ನೀರು ಬಿಡಿಸುವ ಕೆಲಸ ಆಗಲಿ. ಭದ್ರಾ ಜಲಾಶಯದಿಂದ 3 ಟಿ.ಎಮ್.ಸಿ ಗಿಂತ ಅಧಿಕ ಬಿಡಿಸಿಕೊಂಡ ಬಂದ ಉದಾಹರಣೆ ಇಲ್ಲ.ಒಂದು ವೇಳೆ 3 ಟಿ.ಎಮ್.ಸಿ ನೀರು ಬಿಡಿಸಿದರೂ ಎರಡನೇ ಬೆಳೆಗೆ ನೀರು ಸಾಕಾಗಲ್ಲ. ಆ ಕಾರಣಕ್ಕೆ ನೀರಿನ ವಿಷಯದಲ್ಲಿ ರಾಜಕಾರಣ ಮಾಡಬೇಡಿ ನಾಡಗೌಡ್ರೆ ಎಂದು ಪ್ರಶ್ನಿಸಿದರು.ನಾಡಗೌಡರು ನೀರು ಕೈಯಲ್ಲಿದ್ದಾಗ ಯಾಕೆ ಮಾತನಾಡಿಲ್ಲ ಈಗಯಾಕೆ ಮಾತನಾಡುತ್ತಿರುವುದು ಹಿಂದಿನ ಉದ್ದೇಶ ಏನು ತುಂಗಭದ್ರಾ ಜಲಾಶಯದ ಕೇಂದ್ರ ಸರ್ಕಾರದ ಹತೋಟಿಯಲ್ಲಿದೆ ನೀವು ನೀರು ತರುವ ಕೆಲಸ ಮಾಡಿ ಎಂದು ಶಾಸಕರು ನಾಡಗೌಡರಿಗೆ ತಿಳಿಸಿದರು.

ನಂತರ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಕಾಲೇಜು ಕಟ್ಟಡ, ಸಿಸಿ ರಸ್ತೆ ಸೇರಿದಂತೆ ಪ್ರತಿಯೊಂದು ಕಾಮಗಾರಿಗಳು ನಡೆದಿವೆ.ಗ್ಯಾರಂಟಿ ಗಳಿಂದ ಸರ್ಕಾರದಲ್ಲಿ ಹಣ ಇಲ್ಲ ಎನ್ನುವದಕ್ಕೆ ಶಾಸಕರು ಉತ್ತರಿಸಿದರು. ಈ ಪತ್ರಿಕಾ ಪ್ರಕಟಣೆಯಲ್ಲಿ ಖಾಜಿಮಲ್ಲಿಕ್, ಭೀಮನಗೌಡ ಗೋರೆಬಾಳ,ಬಸವರಾಜ ಹಿರೇಗೌಡ ಅಂಬ್ರಸ್,ಅನೀಲಕುಮಾರ ವಾಯ್ ಉಪಸ್ಥಿತರಿದ್ದರು.

## ಕಳಪೆ ಗುಣಮಟ್ಟದ ಕಸದ ಬುಟ್ಟಿಗಳ ಪೂರೈಕೆ ದಾರರ ಮೇಲೆ ಕ್ರಮಕ್ಕೆ ಮನವಿ

❑ ನೈಜ್ಯ ದೆಸೆ ನ್ಯೂಸ್



ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜನಪರ ಬಣ ತಾ,ಘಟಕ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಜಿಲ್ಲಾಧ್ಯಕ್ಷರಾದ ರಂಗರಾವ್ ಕುಲಕರ್ಣಿ ಮಾತನಾಡಿ ಪಟ್ಟಣದ ಪುರಸಭೆ ವತಿಯಿಂದ ಪಟ್ಟಣದ ವಿವಿಧ ವಾರ್ಡ್ ಗಳಲ್ಲಿ ಸಾರ್ವಜನಿಕರಿಗೆ ಕಸವನ್ನು ಸಂಗ್ರಹಿಸುವುದಕ್ಕೆ ನೀಡುವುದಕ್ಕೆಂದು

ಅಂದಾಜು 21ಸಾವಿರದ ನಾಲ್ಕನೂರ ಐವತ್ತು ಡಸ್ಟ್ ಬಿನ್ ಗಳನ್ನು 32 ಲಕ್ಷ ವೆಚ್ಚದಲ್ಲಿ ಖರೀದಿ ಮಾಡಬೇಕಾಗಿರುವ ಡಸ್ಟ್ ಬಿನ್‌ಗಳನ್ನು ಕಡಿಮೆ ಪ್ರಮಾಣದಲ್ಲಿ ಅತ್ಯಂತ ಕಳಪೆ ಗುಣಮಟ್ಟದಿಂದ ಕೂಡಿರುವ ಡಸ್ಟ್ ಬಿನ್ ಗಳನ್ನು ಹೆಚ್ಚಿನ ಮೋತ್ತಕ್ಕೆ ಖರೀದಿ ಮಾಡಿರುವುದಾಗಿ ತಿಳಿದುವರುತ್ತದೆ 10 ಲೀ ಸಾಮಾರ್ಥ್ಯದ ಡಸ್ಟ್ ಬಿನ್‌ಗಳು ಸಾರ್ವಜನಿಕರ ಬಳಕೆಗೆ ಯೋಗ್ಯವಾಗಿಲ್ಲ ಅದ್ದರಿಂದ ಡಸ್ಟ್ ಬಿನ್ ಗಳನ್ನುಪೂರೈಕ್ಕೆ ಮಾಡಿದ ಗುತ್ತಿದಾರರ ಮೇಲೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು ಹಾಗೂ ಪುರಸಭೆವತಿಯಿಂದ ಸಾರ್ವಜನಿಕರಿಗೆ ಡಸ್ಟ್ ಬಿನ್ ವಿತರಣೆ ಮಾಡಿರುವ ಕುರಿತು ಸೂಕ್ತವಾದ ದಾಖಲಾತಿಯನ್ನು ನಿರ್ವಹಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಉಪಾಧ್ಯಕ್ಷರಾದ ಇರ್ಫಾನ್ ಧಣಿ, ರಾಮಣ್ಣನಾಯಕ, ಕೃಷ್ಣದಾನಿ, ಉಸ್ಮಾನ್ ಸಾಬ್,ಯಲ್ಲಪ್ಪನಾಯಕ, ರಾಘವೇಂದ್ರ ನಾಯಕ, ವಿಶ್ವನಾಥ ಪವಾರ್, ಅಮರೇಶ ಪಾಟೀಲ್, ಗಂಗಾಧರ ಪವಾರ್,ಬಾಬಾ ಸಾಬು ಸೇರಿದಂತೆ ಇನ್ನಿತರರು ಇದ್ದರು.

## ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂವಿಧಾನ ದಿನಾಚರಣೆ :ಮಾನ್ವಿ

❑ ನೈಜ್ಯ ದೆಸೆ ನ್ಯೂಸ್



ಮಾನ್ವಿ: ಪಟ್ಟಣದ ಬಾಲಕಿಂಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂವಿಧಾನ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರಾದ ಸಂಜೀವ ಸುಧಾಕರ್ ಅವರು ಮಾತನಾಡಿ, "ಭಾರತದ ಸಂವಿಧಾನವು ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದಾಗಿದೆ.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ನಮ್ಮ ಸಂವಿಧಾನದ ಪಾತ್ರ ಹಿರಿದು. ವಿದ್ಯಾರ್ಥಿಗಳು ಸಂವಿಧಾನದ ಆಶಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು," ಎಂದು ಕರೆ ನೀಡಿದರು. ಮುಖ್ಯ ಭಾಷಣಕಾರರಾಗಿ ಮಾತನಾಡಿದ ಶಿಕ್ಷಕಿ ಬಂಡೆಮ್ಮ ಅವರು, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಶ್ರಮ ಮತ್ತು ತ್ಯಾಗವನ್ನು ಸ್ಮರಿಸಿದರು. ಪ್ರತಿಯೊಬ್ಬ ಪ್ರಜೆಯೂ ತಮ್ಮ ಹಕ್ಕುಗಳ ಜೊತೆಗೆ ಮೂಲಭೂತ ಕರ್ತವ್ಯಗಳ ಬಗ್ಗೆಯೂ ಜಾಗೃತಿ ಹೊಂದಿರಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ಕಾರ್ಯಕ್ರಮದ ಅಂಗವಾಗಿ ಸಾಮೂಹಿಕವಾಗಿ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ರೇಖಾದೇವಿ, ಅಶೋಕ್ ಕುಮಾರ್, ಚನ್ನಬಸವರಾಜ್, ರಜಿನಿ, ಜೈ ಭೀಮ್, ಶೇಕ್ ಹುಸೇನ್, ಅನ್ವರ್ ಹುಸೇನ್, ಶ್ರೀಮತಿ ಕಟ್ಟಿ, ಶರಣಮ್ಮ, ಪ್ರಮೋದ್ ಕುಮಾರ್, ಹಿರೇಮಣಿ, ಶರತ್ ಕುಮಾರ್, ರೇಣುಕಾ, ವಿಶಾಲಾಕ್ಷಿ ಇದ್ದರು.

# ಲೊಯೋಲ ಶಿಕ್ಷಣ ಸಂಸ್ಥೆಯಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆ ಆಚರಣೆ

❑ ನೈಜ್ಯ ದೆಸೆ ನ್ಯೂಸ್



ಮಾನ್ವಿ: ಇಂದು ಪಟ್ಟಣದ ಪ್ರಸಿದ್ದ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಲೊಯೋಲ ಶಿಕ್ಷಣ ಸಂಸ್ಥೆಯಲ್ಲಿ ವಿಭಿನ್ನ ರೀತಿಯಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಯಲ್ಲಪ್ಪ ಹೀರೆಬಾದರದಿನ್ನಿ ವಕೀಲರು ಮತ್ತು ಪ್ರಧಾನ ಕಾರ್ಯದರ್ಶಿಗಳು ತಾಲೂಕ ವಕೀಲರ ಸಂಘ ಮಾನವಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಸಂವಿಧಾನ ರಚನೆಯಲ್ಲಿ ಡಾ॥ಬಿ.ಆರ್.ಅಂಬೇಡ್ಕರ್ ಅವರ ಪಾತ್ರ ಹಾಗೂ ಅವರ ತಂಡ ಪಟ್ಟ ಕಷ್ಟಗಳ ಕುರಿತು ವಿವರಿಸಿದರು.

ಸಂವಿಧಾನದ ಆಶಯ ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಬಗ್ಗೆ ಮಾತನಾಡುತ್ತಾ ನಮ್ಮ ಸಂವಿಧಾನವು ಧೀರ್ಘ ಮತ್ತು ಬರವಣಿಗೆಯ ಸಂವಿಧಾನವಾಗಿದೆ. ಇದನ್ನು ಯಾವುದೇ ದೇಶಗಳ ಸಂವಿಧಾನಕ್ಕೆ ಹೋಲಿಸಲು ಸಾಧ್ಯವಿಲ್ಲ. ಸಂಸ್ಥೆಯಗಳು ಇಂತಹ ವಿಭಿನ್ನ ರೀತಿಯಾದ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮಕ್ಕಳಲ್ಲಿ ಸಂವಿಧಾನದ ಕುರಿತು ಅರಿವು ಹಾಗೂ ಜಾಗೃತಿ ಮೂಡಿಸುವಂತಹ ಕಾರ್ಯ ಮಾಡುತ್ತಿರುವುದು ಜೊತೆಗೆ ಮಾಡುವುದು ಕೂಡಾ ತುಂಬಾ ಅವಶ್ಯಕ ಎಂದರು. ಕಾರ್ಯಕ್ರಮಕ್ಕೆ ಪೂರ್ವದಲ್ಲಿ ಮಾನ್ವಿ ತಾಲೂಕಿನ ವಿವಿಧ ಪ್ರೌಢ ಶಾಲೆಗಳಿಂದ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಗಮಿಸಿದ್ದ ವಿದ್ಯಾರ್ಥಿಗಳಿಗೆ ಕೊಲಾಜ್, ಪೇಸ್ ಪೇಂಟಿಂಗ್, ಆಶು ಭಾಷಣ, ರಂಗೋಲಿ ಮತ್ತು ಮಾದರಿ ಪ್ರದರ್ಶನ ಈ ಎಲ್ಲಾ ಸ್ಪರ್ಧೆಗಳಿಗೆ ಸಂವಿಧಾನ ವಿಷಯ ವಸ್ತುವನ್ನಿಟ್ಟು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಈ ಸ್ಪರ್ಧೆಗಳಿಗೆ ಕಲ್ಮಠ ಶಾಲೆ, ಗಾಂಧೀ ಸ್ಮಾರಕ ಶಾಲೆ, ಸರಕಾರಿ ಬಾಲಕರ ಪ್ರೌಢ ಶಾಲೆ, ಸರಕಾರಿ ಪ್ರೌಢ ಶಾಲೆ ಕೋನಾಪುರ ಪೇಟ್, ಲೊಯೋಲ ಕಾಪೆಪಲಾಡಿ ಶಾಲೆ ಜಾಗೀರ ಪನ್ನೂರು, ಲೊಯೋಲ ಶಾಲೆ ಮಾನ್ವಿ ಹಾಗೂ ಕ್ಸೇವಿಯರ್ ಶಾಲೆ ಮಾನ್ವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ಮತ್ತು ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನಾ ಪ್ರಮಾಣ ಪತ್ರಗಳನ್ನು ವಿತರಿಸಿಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಫಾ.ಅವಿನಾಶ, ಫಾ. ವಿನೋದ ಪೌಲ್ ಪ್ರಾಂಶುಪಾಲರು ಲೊಯೋಲ ಪದವಿ ಕಾಲೇಜು, ಫಾ. ಪ್ರವೀಣ್ ಕುಮಾರ್ ಪ್ರಾಂಶುಪಾಲರು ಲೊಯೋಲ ಪದವಿ ಕಾಲೇಜು, ಫಾಸಿರಿಲ್ ರಾಜ್ ನಿರ್ದೇಶಕರು ಲೊಯೋಲ ಶಾಲೆ, ಫಾ.ವಿಲ್ಸನ್ ಬೆನ್ನಿಸ್, ಮುಖ್ಯೋಪಾಧ್ಯಾಯರು ಕ್ಸೇವಿಯರ್ ಶಾಲೆ, ಶಾಂತಯ್ಯ ಸ್ವಾಮಿ ಹೀರೆಮಠ ದೈಹಿಕ ಶಿಕ್ಷಕರು ಕಲ್ಮಠ ಪ್ರೌಢ ಶಾಲೆ, ಸಿ ಜೂಲಿಯಟ್ ಮೋಂಥೆರೋ ಮುಖ್ಯೋಪಾಧ್ಯಾಯಿನಿ ಲೊಯೋಲ ಶಾಲೆ ಮಾನ್ವಿ ಫಾ. ಜಾರ್ಜ ಪಿಂಟೋ ಸಹಾಯಕ ನಿರ್ದೇಶಕರು ಲೊಯೋಲ ಸಮಾಜ ಸೇವಾ ಕೇಂದ್ರ ಇವರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಮರಿಯಪ್ಪ ಇವರು ನಿರೂಪಿಸಿದರು, ರಕ್ಷಿತಾ ಸ್ವಾಗತಿಸಿದರು ಹಾಗೂ ಶ್ರೀಮತಿ ವಿಜಯಲಕ್ಷ್ಮಿ ಇವರು ವಂದಿಸಿದರು.

## ಸಾಹಿತ್ಯ ಸಿಂಚನ

ರೈತ

ರಯ್ಯಾ ರಯ್ಯಾ ರೈತ
ಈ ನಾಡಿಗೆ ನೀನೆ ಅನ್ನದಾತ

ಚೆನ್ನಾಗಿ ಬೆಳೆದರೆ ನಾಟಿ
ದೇಶಕೆಲ್ಲ ಪಡಿತರ ಚೀಟಿ

ರೈತನ ಹೆಸರಲ್ಲಿ ಮಾಡ್ತಾರ ಲೆಕ್ಕಕ್ಕಿಲ್ಲದಷ್ಟು ಲೂಟಿ
ರೈತನ ಸಂಕಷ್ಟ ಸಮಯದಲಿ ಆಗ್ರೋ ಬೇಟಿ

ಒಂದಲ್ಲಾ ಒಂದೂ ರೀತಿ ಮಾಡ್ತಿರೋ ನೀವೆಲ್ಲಾ ಖ್ಯಾತಿ
ನೀವೆಲ್ಲಾ ಸೇರಿ ಮಾಡಿರೋ ರೈತನ್ನ ಕೋತಿ

ಸಂಘ ಸಂಸ್ಥಗಳಿಗೆ ನಿಡೀದ್ರಿ ದೇಣಿಗೆ
ರೈತನ್ನ ಹಾಕಿದ್ರಿ ಕತ್ತಲ ಕೋಣೆಗೆ

ಸರ್ಕಾರಿ ಸೌಲಭ್ಯ ಕೇಳಿದ್ರೆ
ಹೇಳ್ತೀರಿ ಇರಲಾರದೊಂದ ರೀತಿ

ರೈತ ಬೆಳೆದ ಅನ್ನ ತಿಂತಿಯೋ ಕೋತಿ
ರೈತ ಇಲ್ಲಾ ಅಂದ್ರೆ ತಿಳೀತ್ತು ನಿನಗ ಅನ್ನ ತಿನ್ನೋ ರೀತಿ

ಓ ರೈತ ದೇಶಕ್ಕೆ ನೀನೆ ಬೆನ್ನೆಲುಬು
ತೆಗಿತ್ತಾರ ನಿನ್ನ ಪಕ್ಕೇಲುಬು

ನಾನೊಬ್ಬೋ ರೈತನ ಮಗ ಕಣಪ್ಪಾ
ರೈತನ ಕಷ್ಟನು ಸ್ವಲ್ಪ ಕೇಳ್ರಪ್ಪಾ.....

**ಎಸ್.ದುರಗಪ್ಪ**

# ವಿವಾದಿತ ಕಾಯ್ದೆಗಳ ರದ್ದು ಮತ್ತು 4% ಮುಸ್ಲಿಂ ಮೀಸಲಾತಿ ಮರುಸ್ಥಾಪನೆಗೆ ಆಗ್ರಹ: ಸಿಎಂಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ನ. 26: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ವಿವಾದಿತ ಕರ್ನಾಟಕ ಜಾನುವಾರು ಸಂರಕ್ಷಣಾ ಕಾಯ್ದೆ ಮತ್ತು ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಗೊಳಿಸಬೇಕು ಹಾಗೂ ರದ್ದುಪಡಿಸಲಾದ 4% ಮುಸ್ಲಿಂ ಮೀಸಲಾತಿಯನ್ನು ತಕ್ಷಣವೇ ಮರುಸ್ಥಾಪಿಸಬೇಕೆಂದು ಆಗ್ರಹಿಸಿ ವೆಲ್ ಫೇರ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು.**

ಮುಂಬರುವ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳುವಂತೆ ಒತ್ತಾಯಿಸಿ, ಸಂಘಟನೆಯ ಪ್ರಮುಖರು ಮುಖ್ಯಮಂತ್ರಿಗಳಿಗೆ ಬರೆದ ಜ್ಞಾಪನ ಪತ್ರದ ಮೂಲಕ ಸರ್ಕಾರವನ್ನು ಆಗ್ರಹಿಸಿದ್ದಾರೆ. ಕರ್ನಾಟಕ ಜಾನುವಾರು ಸಂರಕ್ಷಣಾ ಕಾಯ್ದೆ, 2021 ರಾಜ್ಯದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿದೆ. ಈ ಕಾಯ್ದೆಯ ನೆಪದಲ್ಲಿ ಗೋ ಸಾಗಾಣಿಕೆದಾರರ ಮೇಲೆ ಹಲ್ಲೆ, ಶೂಟೌಟ್ ಮತ್ತು ಆಸ್ತಿ ಜಪ್ತಿಯಂತಹ ಘಟನೆಗಳು ನಡೆಯುತ್ತಿವೆ. ಅಲ್ಲದೆ, ರೈತರು ತಾವು ಸಾಕಿದ ಜಾನುವಾರುಗಳನ್ನು ಮಾರಾಟ ಮಾಡಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.



ಧರ್ಮ ಸ್ವಾತಂತ್ರ ಸಂರಕ್ಷಣಾ ಕಾಯ್ದೆ (ಮತಾಂತರ ನಿಷೇಧ ಕಾಯ್ದೆ) ಭಾರತದ ಸಂವಿಧಾನಕ್ಕೆ ವಿರುದ್ಧವಾಗಿದ್ದು, ಇದು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿದೆ. ಪ್ರತಿಯೊಬ್ಬರಿಗೂ ತಮ್ಮಿಷ್ಟದ ಧರ್ಮವನ್ನು ಪಾಲಿಸುವ ಹಕ್ಕನ್ನು ಸಂವಿಧಾನ ನೀಡಿದ್ದರೂ, ಈ ಕಾಯ್ದೆಯು ವ್ಯಕ್ತಿಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದೆ ಎಂದು ದೂರಲಾಗಿದೆ. ಚುನಾವಣಾ ಭರವಸೆ ಈಡೇರಿಸಲು ಒತ್ತಾಯ: 2023ರ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಈ ಜನವಿರೋಧಿ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಭರವಸೆ ನೀಡಿತ್ತು.

ಇದೀಗ ಸರ್ಕಾರವು ತನ್ನ ಮಾತನ್ನು ಉಳಿಸಿಕೊಳ್ಳುವ ಮೂಲಕ ಅಲ್ಪಸಂಖ್ಯಾತರಿಗೆ ಮತ್ತು ರೈತರಿಗೆ ನ್ಯಾಯ ಒದಗಿಸಬೇಕೆಂದು ಮುಖಂಡರು ಒತ್ತಾಯಿಸಿದ್ದಾರೆ. ಜೊತೆಗೆ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಲು, ಹಿಂದೆ ರದ್ದುಪಡಿಸಲಾಗಿದ್ದ 4% ಮುಸ್ಲಿಂ ಮೀಸಲಾತಿಯನ್ನು ಮರುಸ್ಥಾಪಿಸಬೇಕೆಂದು ಇದೇ ವೇಳೆ ಆಗ್ರಹಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಶೇಕ್ ಬಾಬಾ ಹುಸೇನ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಂ.ಎ.ಎಚ್ ಮುಕೀಮ್, ತಾಲೂಕು ಕಾರ್ಯದರ್ಶಿ ನಾಸಿರ್ ಅಲಿ, ಮುಖಂಡರಾದ ಮಿರ್ಜಾ ಬಾಬಾ ಬೇಗ, ಶೇಕ್ ಮಹಬೂಬ್, ಅಹಮದ್ ಹುಸೇನ್, ರಬ್ಬಾನಿ ಖುರೇಶಿ, ಮಹಮ್ಮದ್ ಹರುನ್, ಅಬ್ದುಲ್ ಸಮದ್, ಸಿರಾಜ್ ಪಾಷಾ, ಆಲಮ್ ಸಾಬ್, ಸೈಯದ್ ನಾಸಿರ್ ಉದ್ದಿನ್ ಖಾಜಿ, ರೋಹಿತ್ ಪಾಷಾ ಮುಂತಾದವರು ಉಪಸ್ಥಿತರಿದ್ದರು.

# ತಾಲೂಕಾಡಳಿತ, ನಗರಸಭೆ, ತಾ.ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆಯಿಂದ ಸಂವಿಧಾನ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

**ತಾಲೂಕಾಡಳಿತ, ನಗರಸಭೆ, ತಾಲೂಕು ಪಂಚಾಯತಿ, ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಸಂವಿಧಾನ ದಿನಾಚರಣೆ ಆಚರಿಸಲಾಯಿತು.**

ಮೊದಲಿಗೆ ತಹಶೀಲ್ ಕಚೇರಿಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಪೂಜೆ ನೆರವೇರಿಸಿ, ನಗರದ ಪಿಡಬ್ಲ್ಯೂಡಿ ಕ್ಯಾಂಪಿನಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಸಮಾಜದ ಮುಖಂಡರು, ಜನಪ್ರತಿನಿಧಿಗಳು, ಹೂವಿನಹಾರ ಹಾಕಿ ಜೈಕಾರ ಹಾಕಿದರು. ಈ ವೇಳೆ ತಾಲೂಕು ದಂಡಾಧಿಕಾರಿ ಅರುಣ್ ಕುಮಾರ್ ದೇಸಾಯಿ ಸಂವಿಧಾನ ಪೀಠಿಕೆ ಓದಿದರು. ನಂತರ ಸಾರೋಟದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಇಟ್ಟು ಟೌನ್ ಹಾಲ್ ನವರೆಗೂ ಶಾಲೆ ವಿದ್ಯಾರ್ಥಿಗಳೊಂದಿಗೆ ಭವ್ಯ ಮೆರವಣಿಗೆ ಮಾಡಲಾಯಿತು. ಟೌನ್ ಹಾಲ್ ನಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು.



ಈ ಸಮಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕ–ರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ: ಶಾಸಕ ಹಂಪನಗೌಡ ಬಾದರ್ಲಿ, ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ್ ಹಿರೇಮಠ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡಬಸವರಾಜ, ಮರಿಯಪ್ಪ, ಆರ್.ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ಪೌರಾಯುಕ್ತ ಪಾಂಡುರಂಗ ಇಟಗಿ, ಇಓ ಚಂದ್ರಶೇಖರ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಲಿಂಗಪ್ಪ, ವಸತಿ ನಿಲಯ ಅಧಿಕಾರಿ ಲಿಂಗಪ್ಪ ಅಂಗಡಿ, ಸೇರಿದಂತೆ ಸಮಾಜದ ಮುಖಂಡರು ಭಾಗವಹಿಸಿದ್ದರು.

# ಯಶಸ್ವಿಯಾದ ಮಾರ್ಕೆಟ್ ಮೇಳ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ಎಸ್.ಕೆ. ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಮಂಗಳವಾರ ಮಾರ್ಕೆಟ್ ಮೇಳ ಎಂಬ ವಿನೂತನ ವಿವಿಧ ವಸ್ತುಗಳ ಮತ್ತು ವಾಹನಗಳ ಮಾರಾಟ ಮತ್ತು ಪ್ರದರ್ಶನ ಮೇಳವನ್ನು ಕಾಲೇಜು ಆವರಣದಲ್ಲಿ ಆಯೋಜಿಸಿದ್ದರು, ಪ್ರಥಮ ಬಾರಿಗೆ ನಡೆದ ಈ ಮೇಳದ ಉದ್ಘಾಟನೆಯನ್ನು ವೀರಶೈವ ವಿದ್ಯಾವರ್ಧಕ ಸಂಘದ ಚೇರಮನ್**



**ವ್ಹಿ.ಸಿ.ಹಿರೇಮಠ ರಿಬ್ಬನ್ ಕತ್ತರಿಸಿ ನೆರವೇರಿಸಿದರು.**

ಈ ಮೇಳದಲ್ಲಿ ವಿದ್ಯಾರ್ಥಿಗಳು ರುಚಿಕರವಾದ ಆಹಾರ ಪದಾರ್ಥಗಳ ಮಳಿಗೆಗಳು, ಆಕರ್ಷಕವಾದ ಬಟ್ಟೆ ಮಳಿಗೆಗಳು, ಮನರಜನೆಯ ಆಟಗಳು ಮತ್ತು ವಿಜಯಪುರದ ಪ್ರಸಿದ್ಧ ಕಾರಶೋರಮಗಳಾದ ಹ್ಯುಂಡೈ, ರೆನಾಲ್ಟ್, ಎಮ್.ಜಿ ಹೆಕ್ಟರ, ಮಾರುತಿ ಸೂಜುಕಿ, ಕೀಯಾ ಕಂಪನಿಗಳ ಕಾರಗಳನ್ನು ಪ್ರದರ್ಶನಕ್ಕೆ ಇಡಲಾಗಿ–ತ್ತು ದ್ವಿಚಕ್ರ ವಾಹನ ಬಜಾಜ್ ಮತ್ತು ಇವ್ಹಿ ಸ್ಕೂಟ–ರ್ ವಾಹನಗಳು ಲಭ್ಯ ಇದ್ದವು. ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಸ್ಥಳೀಯ ನಾಗರೀಕರು ನಿರೀಕ್ಷೆಗೂ ಮೀರಿ ಸೇರಿದರು. ಒಟ್ಟು 33 ಮಳಿಗೆಗಳನ್ನು ಹಾಕಲಾಗಿ–ತ್ತು. ವಿದ್ಯಾರ್ಥಿಗಳ ಉದ್ಯಮಶೀಲತೆ ಹಾಗೂ ನವೀನ ಚಿಂತನೆಯನ್ನು ಉತ್ತೇಜಿಸುವುದು ಮೇಳದ ಉದ್ದೇಶವಾಗಿ–ತ್ತು. ವಿ.ವೀ.ಸಂಘದ ಚೇರಮನ್ನರಾದ ವಿ.ಸಿ.ಹಿರೇಮಠ ಮೇಳವನ್ನು ಉದ್ಘಾಟಿಸಿದರು ಈ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಎಮ್.ಎಸ್. ಸರಶೆಟ್ಟಿ ಸಹ ಕಾರ್ಯದರ್ಶಿಗಳು ಮತ್ತು ಬಿ.ಇಡಿ.ಕಾಲೇಜು ಚೇರಮನ್ ಕೆ.ಎಸ್.ಮುರಾಳ, ಪ.ಪೂ.ಕಾಲೇಜು ಚೇರಮನ್ ಎಮ್.ಆರ್ ಕತ್ತಿ, ನಿರ್ದೇಶ ಸಿ.ಆರ್.ಕತ್ತಿ , ಪ್ರಾಥಮಿಕ ಶಾಲೆಯ ಚೇರಮನ್ ಮುರಗೇಶ ವಿರಕ್ತಮಠ, ಬಾಲಕಿಯರ ಪ್ರೌಢಶಾಲೆಯ ಚೇರಮನ್ ಆಯ್.ಬಿ.ಬಿಳೇಬಾವಿ, ಬಾಲಕರ ಪ್ರೌಢಶಾಲೆಯ ಚೇರಮನ್ ಎಮ್.ಸಿ.ಕತ್ತಿ ಹಾಗೂ ನಿರ್ದೇಶಕರು ಸದಸ್ಯರು ಇದ್ದರು. ಮಹಾವಿದ್ಯಾಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಸ್ನೇಹಾ ನಾವದಗಿ,ರಮೇಶ ಜಾಧವ, ಈರಮ್ಮ ಲಕ್ಕಪ್ಪಗೋಳ, ಸಲ್ಮಾ ವಾಲಿಕಾರ ಪ್ರಾಚಾರ್ಯರಾದ ಡಾ. ದಯಾನಂದ ಮೂಗಡ್ಲಿಮಠ ಹಾಗೂ ಮಹಾವಿದ್ಯಾಲಯದ ಸಿಬ್ಬಂದಿವರ್ಗದವರು ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಕಿಶೋರಕುಮಾರ, ಬಾಲಕಿಯರ ಪ್ರೌಡಶಾಲೆಯ ಮುಖ್ಯೋಪಾಧ್ಯಾಯರಾದ ಡಾ.ಅನಿಲಕುಮಾರ ಇರಾಜ ಮುಂತಾದವರು ಉಪಸ್ಥಿತರಿದ್ದರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಸ್ಕಿಯಲ್ಲಿ ಸಂವಿದಾನ ದಿನ ಆಚರಣೆ ತಹಶೀಲ್ದಾರ್ ಮಂಜುನಾಥ ಬೋಗಾವತಿಯಿಂದ ಪ್ರತಿಜ್ಞಾವಿಧಿ ಬೋಧನೆ



❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಸಂವಿಧಾನ ದಿನದ ನಿಮಿತ್ತ ಬುಧವಾರ ತಾಲ್ಲೂಕು ಆಡಳಿತದಿಂದ ಸಂವಿಧಾನ ದಿನ ಹಾಗೂ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಹಳೆಯ ಬಸ್ ನಿಲ್ದಾಣದಲ್ಲಿ ಡಾ. **ಅಂಬೇಡ್ಕರ್ ಪ್ರತಿಮೆಗೆ ತಹಶೀಲ್ದಾರ್ ಮಂಜುನಾಥ ಬೋಗಾವತಿ, ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಸೇರಿದಂತೆ ತಾಲ್ಲೂಕಿನ ಅಧಿಕಾರಿಗಳು, ಸಂಘಟನೆಗಳ ಮುಖಂಡರು ಮಾಲಾರ್ಪಣೆ ಮಾಡಿದರು.**

ತಹಶೀಲ್ದಾರ್ ಮಂಜುನಾಥ ಬೋಗಾವತಿ ಪ್ರತಿಜ್ಞಾವಿಧಿ ಬೋಧಿಸಿದರು. ಶಾಸಕರ ಪುತ್ರ ಆರ್. ಸತೀಶ ತುರ್ವಿಹಾಳ, ತಾಲ್ಲೂಕು ಪಂಚಾಯಿತಿ ಇಒ ಅಮರೇಶ ಯಾದವ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಮೈಬುಸಾಬ ಮುದ್ದಾಪೂರ, ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ, ಸಿಪಿಐ ಬಾಲಚಂದ್ರ ಡಿ. ಲಕ್ಕಂ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಪಂಪಾಪತಿ ಹೂಗಾರ, ದಲಿತ ಸಾಹಿತಿ ಸಿ. ದಾನಪ್ಪ, ದೊಡ್ಡಪ್ಪ ಮುರಾರಿ ಸೇರಿದಂತೆ ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಮುಖ ಬೀದಿಗಳಲ್ಲಿ ಡಾ. ಅಂಬೇಡ್ಕರ್ ಭಾವಚಿತ್ರ ಹಾಗೂ ಸಂವಿಧಾನದ ಪೀಠಿಕೆಯ ಮೆರವಣಿಗೆ ನಡೆಯಿತು. ಅಧಿಕಾ–ರಿಗಳು, ಶಾಲಾ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು. ಮಸ್ಕಿ ಪಟ್ಟಣದ ಗಾಂಧಿ ನಗರದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಮಾಲಾರ್ಪಣೆ ಮಾಡಿದರು.

# ಅರಕೇರಾದಲ್ಲಿ ಶ್ರದ್ಧಾ–ಭಕ್ತಿಯಿಂದ ಜರುಗಿದ ಉತ್ಸವ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ಪಟ್ಟಣದ ಶ್ರೀ ಸೂಗೂರೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಸಂಜೆ ಚಂದ್ರಶೇಖರಯ್ಯ ಸ್ವಾಮಿ ಹಿರೇಮಠ ಸಾನಿಧ್ಯತೆಯಲ್ಲಿ ಶ್ರದ್ಧಾ–ಭಕ್ತಿಯಿಂದ ಅದ್ದೂರಿಯಾಗಿ ಉತ್ಸವ ಜರುಗಿತು.**

ದೇವಸ್ಥಾನದಲ್ಲಿ ಗಣಾರಾಧನೆ, ಎಲೆ ಪೂಜೆ ಸೇರಿದಂತೆ ಭಕ್ತರು ಜ್ಯೋತಿ ಹೊರುವ ಕಾರ್ಯಕ್ರಮಗಳು ನಡೆದವು. ಪುರವಂತರ ವಡವು–ವಚನಗಳು ಹಾಗೂ ನಂದಿಕೋಲು ಸೇವೆ ಮಾಡುವುದರ ಮೂಲಕ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಸ್ಥಾನದ ಕಳಸಗಳ ಹಾಗೂ ಪಲ್ಲಕ್ಕಿ ಮೆರವಣಿಗೆ ಮಾಡಲಾಯಿತು. ರಾತ್ರಿ 8.30ರ ವೇಳೆಗೆ ಸಹಸ್ರಾರು ಭಕ್ತ ಸಮೂಹದ ಮಧ್ಯೆ ಬಸವಣ್ಣನ ಪಾದದ ಕಟ್ಟೆಯವರೆಗೆ ಉತ್ಸವ ಜರುಗಿತು. ವಾದ್ಯ ಮೇಳಗಳೊಂದಿಗೆ ಭಾಗವಹಿಸಿದ ಮಹಿಳೆಯರು ಕಳಸಗಳನ್ನು ಹಿಡಿದು ಉತ್ಸವಕ್ಕೆ ಮೆರಗು ತಂದರು.



ನ.26 ಬುಧವಾರ ಮಹಾರಥೋತ್ಸವ ದಿನದಂದು ಬೆಳಗ್ಗೆ 6 ರಿಂದ 11 ಗಂಟೆಯವರೆಗೆ ದೇವಸ್ಥಾನದ ಸುತ್ತ ಕಳಸದ ಮೆರವಣಿಗೆ ಹಾಗೂ ಪಲ್ಲಕ್ಕಿ ಸೇವೆ ನೆರವೇರಿತು. ಪುರವಂತರು ವಡವು–ವಚನಗಳು ಭಕ್ತರ ಗಮನಸೆಳೆದವು. ಯುವಕರು ನಂದಿಕೋಲು ಕುಣಿಯುವಾಗ ಹಾಕುವ ಹೆಜ್ಜೆಗಳಿಗೆ ಘೋಷಗಳು ಮೊಳಗಿದವು. ದೇವಸ್ಥಾನದಲ್ಲಿ ಕೆಲ ಭಕ್ತರು ಪುರವಂತರಿಂದ ಶಸ್ತ್ರಗಳನ್ನು ಹಾಕಿಸಿಕೊಳ್ಳುವುದರ ಮೂಲಕ ಭಕ್ತಿ ಮೆರೆದರು. ನಂತರ ದೇವಸ್ಥಾನದಲ್ಲಿ ಮಹಾಮಂಗಳಾರತಿ ನೆರವೇರಿಸಿ, ಕಳಸಾರೋಹಣ ನೆರವೇರಿಸಲಾಯಿತು. ಬಳಿಕ ಸಲಾಂ ಹೇಳುವ ಕಾರ್ಯಕ್ರಮ ನಡೆಯಿತು. ದೇವಸ್ಥಾನದ ಸುತ್ತಲೂ ಭಕ್ತರು ಪ್ರದಕ್ಷಿಣೆ ಹಾಕಿದರು. ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

# ಆಲ್ದಾಳ: ನ.30 ರಂದು ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಆಲ್ದಾಳ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಗ್ರಾಮದ ಆರಾಧ್ಯ ದೈವ ಶ್ರೀ ಭದ್ರಕಾಳಿ ಶ್ರೀ ವೀರಭದ್ರೇಶ್ವರ ರಥೋತ್ಸವವು ನ.30 ರಂದು ಅದ್ದೂರಿಯಾಗಿ ಜರುಗಲಿದೆ. ಶ್ರೀ ವೀರಭದ್ರೇಶ್ವರ ಜಾತ್ರೆಯ ದಿನ ಬೆಳಿಗ್ಗೆ 5 ಗಂಟೆಗೆ ಶ್ರೀ ಭದ್ರಕಾಳಿ ಶ್ರೀ ವೀರಭದ್ರೇಶ್ವರನಿಗೆ ಮಹಾರುದ್ರಭಿಷೇಕ ಪೂಜೆ, ಹಾಗೂ ಸಹಸ್ರ ಬಿಲ್ವಾರ್ಚನೆ, ಮಹಾಮಂಗಳರತಿ ಜರುಗಲಿವೆ.**

ಬೆಳ್ಳಿಗೆ 9 ಗಂಟೆಗೆ ಗೋಪುರಕ್ಕೆ ಮತ್ತು ರಥೋತ್ಸವಕ್ಕೆ ಕಳಸರೋಹಣ ಹಾಗೂ ಹೂವಿನ ಅಲಂಕಾರ ಜರುಗಲಿವೆ. ಸಾಯಂಕಾಲ 3 ಗಂಟೆಗೆ ಶ್ರೀ ಭದ್ರಕಾಳಿ ವೀರಭದ್ರೇಶ್ವರ ಸ್ವಾಮಿಯ ಉತ್ಸವ ಮೂರ್ತಿಯೊಂದಿಗೆ ನಂದಿ ಧ್ವಜದೂಡನೆ ಕಳಸ ಸಮೂಹದೊಂದಿಗೆ ಹೊರಡಿಸುವುದರ ಮೂಲಕ



ಸಾಯಂಕಾಲ 5 ಗಂಟೆಗೆ ವೀರಭದ್ರರೇಶ್ವರ ಮಹಾರಥೋತ್ಸವ ವಿಜೃಂಭಣೆಯಿಂದ ಜರುಗಲಿದೆ. ನಂತರ ಸಾಯಂಕಾಲ 7 ಗಂಟೆಗೆ ಅಗ್ನಿಕುಂಡ ಪ್ರವೇಶ ಮಹೋತ್ಸವ ಜರುಗಲಿದೆ. ಯಮನೂರು ಗ್ರಾಮದ ಬಸವೇಶ್ವರ ಸಂಘದ ಶ್ರೀ ರುದ್ರಮುನಿಸ್ವಾಮಿ ಹಾಗೂ ಗುರು ಶಾಂತಯ್ಯ ಸ್ವಾಮಿ ಇವರಿಂದ ಪುರವಂತಿ–ಕೆ ಮತ್ತು ಅಮರಪ್ಪ ಹೂಗಾರ ಸಂಗಡಿರಿಂದ ಶಹನಾಯಿ ಕಾರ್ಯಕ್ರಮ ಜರುಗಲಿದ್ದು ಸಕಲ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಅದರಂತೆ ಡಿ.1 ರಂದು ರಂದು ವೀರಭದ್ರೇಶ್ವರ ಜಾತ್ರೆಯ ಎರಡನೇ ದಿನ ಸಾಯಂಕಾಲ 5 ಗಂಟೆಗೆ ನಂದಿಕೋಲು ಪುರವಂತಿಕೆ ಸೇವೆ, ಹಾಗೂ ಕಡುಬಿನ ಕಾಳಗ ನಡೆಯಲಿದೆ. ಜಾತ್ರೆಯ ವಿಶೇಷತೆ ಅಂಗವಾಗಿ ನ. 27 ಗುರುವಾರದಂದು ಶ್ರೀ ಭದ್ರಕಾಳಿ ಶ್ರೀ ವೀರಭದ್ರೇಶ್ವರ 4 ನೇ ವರ್ಷದ ಕಲ್ಯಾಣೋತ್ಸವ ಹಾಗೂ ಮಹಾದ್ವಾರ ಲೋಕಾರ್ಪಣೆ ಜರುಗಲಿದೆ. ಅದರಿಂದ ಸಕಲ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶ್ರೀ ಭದ್ರಕಾಳಿ, ಶ್ರೀ ವೀರಭದ್ರೇಶ್ವರ ಸದ್ಭಕ್ತ ಮಂಡಳಿ ಹಾಗೂ ಶ್ರೀ ಬಸವೇಶ್ವರ ಯುವಕ ಸಂಘ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ

ರೈಲ್ ವೀಲ್ ಫ್ಯಾಕ್ಟರಿ ನೇಮಕಾತಿ ಸಂಸ್ಥೆ ರೈಲ್ ವೀಲ್ ಫ್ಯಾಕ್ಟರಿ ಪೋಸ್ಟ್ ಹೆಸರು :ಕ್ರೀಡಾ ವ್ಯಕ್ತಿ ಖಾಲಿ ಹುದ್ದೆಗಳ ಸಂಖ್ಯೆ 15 ಹುದ್ದೆಗಳು ಅರ್ಹತೆ 10ನೇ ತರಗತಿ, ಐಟಿಐ, 12ನೇ ತರಗತಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 29–ನವೆಂಬರ್–2025 Official Website: rwf.indianrailways.gov.in ಕೊನೆಯ ದಿನಾಂಕ: 29–ನವೆಂಬರ್–2025

# ಸಂವಿಧಾನ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಸಂವಿಧಾನದ ಶ್ರೇಷ್ಠತೆ ಅದರ ಆಶಯಗಳನ್ನು ಪಾಲಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಏಕತೆ ಭಾತೃತ್ವ ಜಾತ್ಯತೀತ ಮೌಲ್ಯಗಳನ್ನು ಎತ್ತಿ ಹಿಡಿಯಲು ನಾವೆಲ್ಲರೂ ಸಂಕಲ್ಪ ಮಾಡಬೇಕು. ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದಾಗಿದ್ದು ಅದಕ್ಕೆ ಸಂವಿಧಾನವೇ ಆಧಾರ ಸ್ತಂಭವಾಗಿದೆ, ಇದರ ರಕ್ಷಣೆಗೆ ನಾವೆಲ್ಲರೂ ಮುಂದಾಗ ಬೇಕಾಗಿದೆ ಎಂದು ಕನ್ನಡ ಉಪನ್ಯಾಸಕಿ ಡಾ.ಸುಜಾತಾ ಚಲವಾದಿ ಹೇಳಿದರು.**



ಬುಧವಾರ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕ ಆಡಳಿತ, ತಾಲೂಕ ಪಂಚಾಯತ್, ಪುರಸಭೆ ತಾಳಿಕೋಟಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಮುದ್ದೇಬಿಹಾಳ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಸಂವಿಧಾನ ಕುರಿತು ಅವರು ಉಪನ್ಯಾಸ ನೀಡಿದರು. ಸಂವಿಧಾನದ ಪೀಠಿಕೆ ಸಂವಿಧಾನದ ಪ್ರತಿಪುಟದಲ್ಲಿ ಉಲ್ಲೇಖಿಸಲ್ಪಟ್ಟಿರುವ ಅಂಶಗಳು ನಮ್ಮ ಹಕ್ಕು ಮತ್ತು ಕರ್ತವ್ಯಗಳು ನಮ್ಮ ಬದುಕಿನ ದಾರಿಯನ್ನು ಮುನ್ನಡೆಸುವಂತಿವೆ. ತುಳಿತಕ್ಕೊಳಗಾದವರಿಗೆ ನ್ಯಾಯ ಒದಗಿಸುವ ಕೆಲಸವನ್ನು ಸಂವಿಧಾನ ಎತ್ತಿ ಹಿಡಿಯುತ್ತದೆ. ಡಾ.ಅಂಬೇಡ್ಕರ್ ಅವರು ತಮ್ಮ ಮಕ್ಕಳು ಹಾಗೂ ಕುಟುಂಬವನ್ನು ತ್ಯಾಗ ಮಾಡಿ ಇಂತಹ ಶ್ರೇಷ್ಠ ಸಂವಿಧಾನ ಕೊಟ್ಟು ಹೋಗಿದ್ದಾರೆ ಅದರ ಪ್ರಾಮಾಣಿಕ ಅನುಸರಣೆಗೆ ನಾವೆಲ್ಲರೂ ಮುಂದಾಗಬೇಕಾಗಿದೆ. ಈ ಶ್ರೇಷ್ಠ ಸಂವಿಧಾನವನ್ನು ಪ್ರತಿಯೊಬ್ಬರೂ ಓದಬೇಕು ಅದರಲ್ಲೂ ವಿಶೇಷವಾಗಿ ಯುವ ಸಮುದಾಯ ಸಂವಿಧಾನವನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು, ಪ್ರತಿ ಮನೆಯಲ್ಲಿಯೂ ಸಂವಿಧಾನದ ಅಧ್ಯಯನ ನಡೆಯುವಂತಹ ವಾತಾವರಣ ನಿರ್ಮಾಣವಾಗಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಹಶೀಲ್ದಾರ್ ಡಾ.ವಿನಯಾ ಹೂಗಾರ ಅವರು ಮಾತನಾಡಿ ಭಾರತ ಸಂವಿಧಾನ ವಿಶ್ವದ ಅತಿ ದೊಡ್ಡ ಲಿಖಿತ ಸಂವಿಧಾನವಾಗಿದೆ ಇದೊಂದು ಮಾದರಿ ಸಂವಿಧಾನವಾಗಿದ್ದು ಇದನ್ನು ತಿಳಿದುಕೊಳ್ಳುವ ಪ್ರಯತ್ನ ವಿದ್ಯಾರ್ಥಿ ದಿಸೆಯಿಂದಲೇ ಆರಂಭವಾಗಬೇಕು. ಸಂವಿಧಾನ ದಿನಾಚರಣೆ ಕೇವಲ ಆಚರಣೆಗೆ ಮಾತ್ರ ಸೀಮಿತವಾಗಬಾರದು ಎಂದರು. ಮುದ್ದೇಬಿಹಾಳ ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ನನ್ನ ಮತ ನನ್ನ ಹಕ್ಕು ಹಾಗೂ ಗಾಂಧೀಜಿ ಅವರ ಜೀವನ ಕುರಿತು ನಡೆದ ತಾಲೂಕ ಹಾಗೂ ಜಿಲ್ಲಾ ಮಟ್ಟದ ಚಿತ್ರಕಲೆ ಹಾಗೂ ಛಾಯಾಗ್ರಹಣ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂವಿಧಾನದ ಪೀಠಿಕೆ ಓದಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.ತಾಪಂ ಇಓ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಪಿಎಸ್ಐ ಜ್ಯೋತಿ ಖೋತ್,ಸ.ಕ.ಇ.ಕಛೇರಿ ಅಧೀಕ್ಷಕ ಶಿವಲಿಂಗಪ್ಪ ಹಚಡದ, ದಲಿತ ಮುಖಂಡರಾದ ಮುತ್ತಪ್ಪ ಚಮಲಾಪೂರ, ಬಸವರಾಜ ಕಟ್ಟಿಮನಿ,ಜೈಭೀಮ ಮುತ್ತಗಿ,ನಿಲಯ ಪಾಲಕರಾದ ಎಸ್ ಎನ್ ಮಲ್ಲಾಡೆ ಎನ್.ವಿ.ಕೋರಿ,ಎಸ್.ಎಮ್.ಕಲಬುರ್ಗಿ,ಮಹಾಂತೇಶ ತಾಳಿಕೋಟಿ, ರೇಣುಕಾ ಪಾಟೀಲ, ವಿವಿಧ ದಲಿತ ಪರ ಸಂಘಟನೆಗಳ ಪದಾಧಿಕಾರಿಗಳು, ಪಟ್ಟಣದ ಗಣ್ಯರು, ತಾಲೂಕಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಇದ್ದರು. ವೇದಿಕೆ ಕಾರ್ಯಕ್ರಮ ಮುನ್ನ ಬೆಳಿಗ್ಗೆ 9:00 ಘಂಟೆಗೆ ಡಾ.ಅಂಬೇಡ್ಕರ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಸಕಲ ವಾದ್ಯ ಮೇಳಗಳೊಂದಿಗೆ ಅಂಬೇಡ್ಕರ್ ವೃತ್ತದಿಂದ ಆರಂಭವಾಗಿ ಅಂಬಾಭವಾನಿ ಗುಡಿ,ಕತ್ರಿಬಜಾರ್, ಶಿವಾಜಿ ಸರ್ಕಲ್, ಮಹಾರಾಣಾ ಪ್ರತಾಪ್ ವೃತ್ತ, ಬಸ್ ನಿಲ್ದಾಣ ಮಾರ್ಗದಿಂದ ಡಾ. ಬಿ ಆರ್ ಅಂಬೇಡ್ಕರ್ ಭವನಕ್ಕೆ ತಲುಪಿತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು

# ಮಗುವಿನ ದತ್ತು ಪ್ರಕ್ರಿಯೆ ಕಾನೂನಾತ್ಮಕವಾಗಿರಲು ಜಾಗೃತಿ ವಹಿಸಿ: ಡಾ ಗಣೇಶ್ ಕೆ ಸಲಹೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ನವೆಂಬರ್ 26 (ಕರ್ನಾಟಕ ವಾರ್ತೆ): ಜನ್ಮವೆತ್ತುವ ಪ್ರತಿಯೊಂದು ಮಗುವಿನ ಜೀವನದ ಭವಿಷ್ಯಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕಿದ್ದು, ಅದರಲ್ಲೂ ಅನಾಥ, ನಿರ್ಗತಿಕ ಹಾಗೂ ಪರಿತ್ಯಕ್ತ ಮಕ್ಕಳಿಗೂ ಕೂಡ ಪ್ರೀತಿ, ವಾತ್ಸಲ್ಯ, ಮಮತೆ ಹಾಗೂ ಬಾಂಧವ್ಯವನ್ನು ಕಾನೂನಾತ್ಮಕವಾಗಿ ದತ್ತು ತೆಗೆದುಕೊಳ್ಳುವ ಕುರಿತು ಮಾಹಿತಿ ನೀಡಬೇಕು ಎಂದು ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ ಅವರು ತಿಳಿಸಿದರು.**




ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ಮಕ್ಕಳ ರಕ್ಷಣಾ ಘಟಕ ರವರ ಸಹಯೋಗದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೃಷ್ಣಾ ಸಭಾಂಗಣದಲ್ಲಿ ದತ್ತು ಮಾಸಾಚರಣೆ ಪ್ರಯುಕ್ತ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ನವೆಂಬರ್ 26ರಂದು ಜರುಗಿದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪ್ರಸ್ತುತ ವರ್ಷ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಸಹ ದತ್ತು ತೆಗೆದುಕೊಂಡು ಹೊಸ ಬದುಕಿಗೆ ಅವಕಾಶ ಮಾಡಿಕೊಡಲು ಜನತೆಯು ಮುಂದೆ ಬರಲು ಜನಜಾಗೃತಿ ನೀಡಬೇಕು ಎಂದು ತಿಳಿಸಿದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಕಿರಲಿಂಗಪ್ಪ ಮಾತನಾಡಿ, ಯಾವುದೋ ಕಾರಣ, ಸಂದಿಗ್ಧ ಸನ್ನಿವೇಶಗಳಿಂದ ಕಂದಮ್ಮಗಳನ್ನು ಬೀದಿ, ತಿಪ್ಪೆ, ಕಾಲುವೆ ಬದಿ ಬಿಟ್ಟುಹೋಗುವ ಹಲವಾರ ಉದಾಹರಣೆಗಳಿವೆ.

ಇಂತ ಸಂದರ್ಭದಲ್ಲಿ 1098ಗೆ ಕರೆಮಾಡಿ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿ ಮಗುವನ್ನು ಒಪ್ಪಿಸಿದಲ್ಲಿ ಮಕ್ಕಳನ್ನು ಸಾಕುವ ಅದೆಷ್ಟೊ ಪಾಲಕರಿಗೆ "ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾಯ್ದೆ–2015" ರಡಿ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದ ಮಾರ್ಗಸೂಚಿಅನ್ವಯ ದತ್ತು ನೀಡಲಾಗುತ್ತಿದ್ದು, ದಯವಿಟ್ಟು ಯಾರು ನವಜಾತ ಶಿಶು ಹಾಗೂ ಮಕ್ಕಳನ್ನು ಸಹ ಅನಾಥವಾಗಿಸಬೇಡಿ ಎಂದು ಎಲ್ಲರೂ ಸೇರಿ ಜಾಗೃತಿ ನೀಡೋಣ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಎಮ್ ಶಾಕೀರ್ ಮೊಹಿಯುದ್ದೀನ್, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಶಿವಕುಮಾರ್, ಡಾ.ಶೀತಲ್, ಬಾಯಿ ಆರೋಗ್ಯ ನೋಡಲ್ ಅಧಿಕಾರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್ಓ ಬಸಯ್ಯ, ಆಪ್ತ ಸಹಾಯಕರಾದ ಲೇಪಾಕ್ಷಯ್ಯ, ಮಕ್ಕಳ ರಕ್ಷಣಾ ಘಟಕದ ತಿಕ್ಕಯ್ಯ, ದಿನೇಶ್, ಶೋಭಾ, ಎಲ್ಲ ಕಾರ್ಯಕ್ರಮ ಅಧಿಕಾರಿಗಳು ಹಾಗೂ ಟಿಬಿ ವಿಭಾಗದ ಅಧಿಕಾರಿಗಳು, ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕಾರ್ಮಿಕ ಕಾಯ್ದೆಗಳನ್ನು ಹಿಂಪಡೆಯಲು ಒತ್ತಾಯಿಸಿ ಶ್ರಮಜೀವಿ ಎಪಿಎಂಸಿ ಹಮಾಲರ ಸಂಘ ಪ್ರತಿಭಟನೆ




ನೈಜ್ಯ ದೆಸೆ ನ್ಯೂಸ್

**ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡುವಂತೆ ಹಾಗೂ ಸಮಾನ ವೇತನ ಪಾವತಿಗೆ ಒತ್ತಾಯಿಸಿ ಶ್ರಮಜೀವಿ ಎಪಿಎಂಸಿ ಹಮಾಲರ ಸಂಘ ಟಿಯುಸಿಐ ತಾಲೂಕು ಸಮಿತಿ ವತಿಯಿಂದ ನಗರದ ಎಪಿಎಂಸಿಯಿಂದ ತಹಶೀಲ್ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.**

ಮೆರವಣಿಗೆ ಉದ್ದಕ್ಕೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಹಿಂಪಡೆಯಲು ಆಗ್ರಹಿಸಲಾಯಿತು. ಈ ಪ್ರತಿಭಟನೆ ಉದ್ದೇಶಿಸಿ ಸಂಘಟನೆ ಗೌರವಾಧ್ಯಕ್ಷ ಎಚ್.ಎನ್.ಬಡಿಗೇರ್, ಕಾರ್ಮಿಕ ಮುಖಂಡ ನಾರಾಯಣ ಬೆಳಗುರ್ಕಿ ಮಾತನಾಡಿ, ಕಾರ್ಮಿಕ ಸಂಘಟನೆಗಳು ನಿರಂತರ ಹೋರಾಟ ಮಾಡಿ ಹಕ್ಕುಗಳನ್ನು ಪಡೆದಿದ್ದರು. ಆದರೆ ಕೋಮುವಾದಿ ನರೇಂದ್ರ ಮೋದಿ ಸರ್ಕಾರ ಕಾರ್ಮಿಕ ಕಾಯ್ದೆಗಳನ್ನು ಸುಗ್ರೀವ ಆಜ್ಞೆ ಮೂಲಕ ವಜಾಗೊಳಿಸಿ 4 ಕಾರ್ಮಿಕ ಕೋಡ್ ಬಿಲ್ ಮಾಡಿದ್ದರು.

ಈಗ ನವೆಂಬರ್ 21 ಕ್ಕೆ ಅಧಿಕೃತವಾಗಿ ಈ ಕೋಡ್ ಬಿಲ್ ಗಳು ಜಾರಿಗೆ ಗೊಳಿಸಿದ್ದು, ಇದು ಬಲವಂತವಾಗಿ ಕಾರ್ಮಿಕ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ. ಹಿಂದುತ್ವವಾದ ಧೃವಿಕರಣಕ್ಕಾಗಿ ಹಾಗೂ ಕಾರ್ಪೊರೇಟ್ ಕಂಪನಿಗಳ ಪರವಾಗಿ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಜಾರಿಗೆ ಗೊಳಿಸಿದ್ದು ಅತ್ಯಂತ ಖಂಡನೀಯ. ಕೂಡಲೇ ಈ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ರದ್ದು ಪಡಿಸಬೇಕು ಸಾರ್ವಜನಿಕ ವಲಯವನ್ನು ಖಾಸಗೀಕರಣ ಮಾಡುವುದನ್ನು ಕೈಬಿಡಬೇಕು. ಕನಿಷ್ಠ 30 ಸಾವಿರ ವೇತನ ಜಾರಿಗೊಳಿಸಲು ಒತ್ತಾಯಿಸಿ ತಹಶೀಲ್ದಾರರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ಈ ವೇಳೆ: ಟಿಯುಸಿಐ ರಾಜ್ಯಾಧ್ಯಕ್ಷ ಅಮೀರ್ ಅಲಿ, ಶ್ರಮಜೀವಿ ಎಪಿಎಂಸಿ ಹಮಾಲರ ಸಂಘದ ಅಧ್ಯಕ್ಷ ಮಾಬುಸಾಬ ಬೆಳ್ಳಟ್ಟಿ, ಉಪಾಧ್ಯಕ್ಷ ನಾಗಪ್ಪ, ಕಾರ್ಯದರ್ಶಿ ವೆಂಕನಗೌಡ, ಕರ್ನಾಟಕ ರೈತ ಸಂಘದ ಅಧ್ಯಕ್ಷರಾದ ಬಮ್ಮ ಬಸ್ಸಾಪುರ, ಖಜಾಂಚಿ ತಿಮ್ಮಣ್ಣ, ಸೇರಿದಂತೆ ಅನೇಕರಿದ್ದರು.

# ಅಜೀಂ ಪ್ರೇಮ ಜೀ ಫೌಂಡೇಷನ್ ವತಿಯಿಂದ ಸನ್ ರೈಸ್ ಕಾಲೇಜಿನಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರಿನ ಸನ್ ರೈಸ್ ಡಿ ಫಾರ್ಮಸಿ , ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜಿನ ನರ್ಸಿಂಗ್ ವಿಭಾಗದಲ್ಲಿ ಸಂವಿಧಾನ ದಿನಾಚರಣೆಯನ್ನು ಶ್ರಮದಾಯಕ ಹಾಗೂ ಜಾಗೃತಿ ಮೂಡಿಸುವ ಚಟುವಟಿಕೆಗಳೊಂದಿಗೆ ಆಚರಿಸಲಾಯಿತು.**





ಈ ಸಂದರ್ಭದಲ್ಲಿ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ವತಿಯಿಂದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಭಾಗ್ಯ ಹಾಗೂ ಶ್ರೀ ಕೃಷ್ಣೆಗೌಡರು ಆಗಮಿಸಿ ವಿದ್ಯಾರ್ಥಿಗಳಿಗೆ ಸಂವಿಧಾನದ ತಾತ್ಪರ್ಯ, ಪಾದುಕೃತ ಹಕ್ಕು?ಕರ್ತವ್ಯಗಳು ಹಾಗೂ ಸಂವಿಧಾನದ ಮೌಲ್ಯಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅತ್ತಾರ್ ರವರ ನೇತೃತ್ವದಲ್ಲಿ ಸಂವಿಧಾನದ ಪೀಠಿಕೆ ಓದಿ ಉದ್ಘಾಟಿಸಲಾಯಿತು. ನಂತರ ವಿದ್ಯಾರ್ಥಿಗಳಿಗಾಗಿ ಸಂವಿಧಾನ ಜಾಗೃತಿ ಚಟುವಟಿಕೆಗಳು, ಗುಂಪು ಚರ್ಚೆಗಳು, ಮತ್ತು ಶೈಕ್ಷಣಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಸಂವಿಧಾನದ ಪೀಠಿಕೆಯನ್ನು ಶ್ರೀ ಲಾಜರ್ ಸಿರಿಲ್ ಜಿ ಅವರು ವಾಚಿಸಿದರು, ಇದರಿಂದ ಕಾರ್ಯಕ್ರಮಕ್ಕೆ ಗೌರವವು ಮತ್ತು ಗಂಭೀರತೆಯನ್ನು ತಂದಿತು. ಒಟ್ಟಾರೆಯಾಗಿ, ಸಿಬ್ಬಂದಿಗಳು , ವಿದ್ಯಾರ್ಥಿಗಳು, ಮತ್ತು ಅತಿಥಿಗಳ ಸಕ್ರಿಯ ಭಾಗವಹಿಸುವಿಕೆಯಿಂದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

# ಮಹಿಳೆ ಮಕ್ಕಳ ಭದ್ರತೆಗಾಗಿ ಎಐಎಂಎಸ್ ಎಸ್ ರಾಷ್ಟ್ರಮಟ್ಟದ ಸಹಿ ಸಂಗ್ರಹ ಹೋರಾಟ: ಕಲಬುರಗಿಯಲ್ಲಿ ಮಹಿಳೆಯರ ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಯಲು ಉದ್ದೇಶಿಸಿದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ) ವತಿಯಿಂದ ನಡೆಯುತ್ತಿರುವ ರಾಷ್ಟ್ರವ್ಯಾಪಿ ಸಹಿ ಸಂಗ್ರಹ ಆಂದೋಲನ ಕ್ಕೆ ಮಂಗಳವಾರ ಕಲಬುರಗಿಯಲ್ಲಿ ಮಹಿಳಾ ಹೋರಾಟಕ್ಕೆ ಧ್ವನಿ ನೀಡುವ ಕಾರ್ಯಕ್ರಮ ಆಯೋಜಿಸಲಾಯಿತು.**



ಇಂದಿನಿಂದ 25 ಮಾರ್ಚ್ 2026ರವರೆಗೆ ನಡೆಯುವ ಈ ಅಭಿಯಾನದ ಭಾಗವಾಗಿ, ಜಿಲ್ಲಾ ಸಮಿತಿ ನಗರದ ಸುಪರ್ ಮಾರ್ಕೆಟ್‌ನಲ್ಲಿ ಸಹಿ ಸಂಗ್ರಹ ಕಾರ್ಯಕ್ರಮ ಹಮ್ಮಿಕೊಂಡಿತು. ಕಾರ್ಯಕ್ರಮ ಉದ್ಘಾಟಕರಾಗಿ ಖ್ಯಾತ ಕವಿಯತ್ರಿ ಸಂಧ್ಯಾ ಹೊನಗುಂಟಿಕರ್ ಅವರು ಮಾತನಾಡಿ, ಮಹಿಳೆಯರು ಮತ್ತು ಮಕ್ಕಳ ಭದ್ರತೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಿದರು. ಅವರು ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ನೀಡಬೇಕು, ಸಮೂಹ ಮಾಧ್ಯಮಗಳಲ್ಲಿ ಹರಡುತ್ತಿರುವ ಅಶ್ಲೀಲ ಚಿತ್ರಗಳು ಮತ್ತು ಕ್ರೌರ್ಯವನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಒತ್ತಾಯಿಸಿದರು.

ಜೊತೆಗೆ ಎಲ್ಲಾ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಭದ್ರತೆ ಖಾತರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ಕೊನೆಗೆ, ಮಹಿಳೆಯರ ಘನತೆಗಾಗಿ ಹೋರಾಡಲು ಜಿಲ್ಲೆಯ ಮಹಿಳೆಯರು ಮುಂದಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಗುಂಡಮ್ಮ ಮಡಿವಾಳ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಡಾ. ಸೀಮಾ ದೇಶಪಾಂಡೆ, ರಾಧಾ ಜಿ. ಅವರು ನೇತೃತ್ವ ವಹಿಸಿದರು. ಈ ವೇಳೆ ಜಿಲ್ಲಾ ನಾಯಕರುಗಳಾದ ವಿಶಾಲಾಕ್ಷಿ ಪಾಟೀಲ್, ಮಹಾದೇವಿ ಮಾನೆ, ಮಹಾದೇವಿ ಜಮಾದರ್, ಸಾಬಮ್ಮ ಕಟ್ಟಿಮನಿ, ಜಯಶ್ರೀ, ರೂಪಾ, ಉಷಾ, ರಾಧಿಕಾ, ರೇಣುಕಾ, ಭಾರತಿ, ಶಿಲ್ಪಾ, ಶರಣಮ್ಮ ಸೇರಿದಂತೆ ಹಲವಾರು ವಿದ್ಯಾರ್ಥಿನಿಯರು ಮತ್ತು ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ತೃಪ್ತಿ ಎಜ್ಯುಕೇಶನಲ್ ಟ್ರಸ್ಟ್ (ರಿ)ಸಿಂಧನೂರು ಪೋಲಿಸ್ ಇಲಾಖೆ ವತಿಯಿಂದ ಪೋಕ್ಸೋ ಕಾಯ್ದೆಯ ಬಗ್ಗೆ ಅರಿವು ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಆಕ್ಸಫರ್ಡ್ ಸಮೂಹ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಶ್ರೇಷ್ಠಿ ನೇತೃತ್ವದಲ್ಲಿ ಜರುಗಿದ ಅಲಬನೂರು ಸರಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಶ್ರೀ ಆರ್ ಅನಿಲ್ ಕುಮಾರ್ ರವರು ಉದ್ಘಾಟಿಸಿದರು.**



ನಂತರದಲ್ಲಿ ಮಾತಾನಾಡಿದ ಅವರು ಇತ್ತೀಚೆಗೆ ಮಕ್ಕಳ ಮೇಲೆ ನಿರಂತರವಾಗಿ ನಡೆಯುತ್ತಿರುವ ಅತ್ಯಾಚಾರ,ದೌರ್ಜನ್ಯ,ಹಿಂಸೆ,ಕಿರುಕುಳ ತಡೆಗಟ್ಟಲು ಪೋಕ್ಸೋ ಕಾಯ್ದೆಯ ಬಗ್ಗೆ ಮಾಹಿತಿ ನೀಡಿ ಅದರ ಬಗ್ಗೆ ಅರಿವು ಮೂಡಿಸಿದರು ಮತ್ತು ಅದರ ಕುರಿತು ಜಾಗೂರಕರಾಗಿರಬೇಕು ಎಂದು ಹೇಳಿದರು ಈ ಸಂಧರ್ಬದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪರಶುರಾಮ ಮಲ್ಲಾಪುರ ಅಧ್ಯಕ್ಷರು ನೊಬೆಲ್ ಪ,ಪೂ ಕಾಲೇಜು ಸಿಂಧನೂರು ಇವರು ಬಾಲಕಿಯರ ಭದ್ರತೆ,ಸುರಕ್ಷತೆ, ರಕ್ಷಣೆಗೆ ಸಮಾಜದ ಪ್ರತಿಯೊಬ್ಬರು ಹೊಣೆಗಾರರು ಎಂದು ತಿಳಿಸಿದರು ಈ ಮೂಲಕ ಬಿತ್ತಿ ಪತ್ರಗಳನ್ನು ಕೊಟ್ಟು ಮಾಹಿತಿಯನ್ನು ನೀಡುವುದರ ಮೂಲಕ ಜಾಗೃತಿಯನ್ನು ಮೂಡಿಸಿದರು ಈ ಕಾರ್ಯಕ್ರದ ಅಧ್ಯಕ್ಷತೆಯನ್ನು ಮೌನೇಶ ಉಪನ್ಯಾಸಕರು ಸರಕಾರಿ ಪದವಿ ಪೂರ್ವ ಕಾಲೇಜು ಅಲಬನೂರು.

ಮುಖ್ಯ ಅತಿಥಿಗಳಾಗಿ ಸತ್ಯನಾರಾಯಣ ಶ್ರೇಷ್ಠಿ ಅಧ್ಯಕ್ಷರು ಆಕ್ಸ್‌ಫರ್ಡ್ ಸಮೂಹ ಸಂಸ್ಥೆ ಸಿಂಧನೂರು, ಶ್ರೀ ರಾಮರೆಡ್ಡಿ ಹುಡಾ ಶಿಕ್ಷಕರು ಶಿವಯೋಗಿ ಒಳಬಳ್ಳಾರಿ ಪ್ರೌಢಶಾಲೆ ಒಳಬಳ್ಳಾರಿ. ಶ್ರೀ ವೆಂಕಟೇಶ ಕುಲಕರ್ಣಿ ಮುಖ್ಯಗುರುಗಳು ಸ,ಪ್ರೌ,ಶಾಲೆ ಮಾಡ ಶಿರವಾರ.ಮಹಿಬೂಬ್ ಕನ್ನಡ ಉಪನ್ಯಾಸಕರು ಸರ್ಕಾರಿ ಪದವಿಪೂರ್ವ ಕಾಲೇಜು ಅಲಬನೂರು. ಶ್ರೀ ಶಂಕರಗೌಡ ಬೂತಲದಿನ್ನಿ ಅರ್ಥಶಾಸ್ತ್ರ ಉಪನ್ಯಾಸಕರು.ಶ್ರೀ ಪಂಪಾಪತಿ ಕಲ್ಮಂಗಿ ಇತಿಹಾಸ ಉಪನ್ಯಾಸಕರು. ಬಿ.ರವಿಕುಮಾರ್ ಸಾಸಲಮರಿ. ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಅನಸ್ಥೇಷಿಯಾಲಜಿ

MD in Anesthesiology 3 ವರ್ಷಗಳ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಆಗಿದ್ದು, ವೈದ್ಯರನ್ನು ಅನಸ್ಥೇಷಿಯಾ ನೀಡುವುದು, ನೋವು ನಿರ್ವಹಣೆ ಮಾಡುವುದು ಮತ್ತು ತುರ್ತು/ಗಂಭೀರ ಚಿಕಿತ್ಸಾ ಪ್ರಕರಣಗಳನ್ನು ಕೈಗಾರಿಕೆಗೊಳಿಸುವುದರಲ್ಲಿ ತರಬೇತುಗೊಳಿಸುತ್ತದೆ. ಶಸ್ತ್ರಚಿಕಿತ್ಸೆ ಮತ್ತು ತುರ್ತು ಚಿಕಿತ್ಸೆಯಲ್ಲಿ ಅನಸ್ಥೇಷಿಯ ತಜ್ಞರ ಪಾತ್ರ ಅವಶ್ಯಕವಾಗಿರುವುದರಿಂದ, ಇದು ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಂತ ಬೇಡಿಕೆಯ ಕ್ಲಿನಿಕಲ್ ಸ್ಪೆಷಲೈಸೇಶನ್ಗಳಲ್ಲಿ ಒಂದಾಗಿದೆ.

ಈ ಕೋರ್ಸ್ವು ಶಸ್ತ್ರಚಿಕಿತ್ಸೆ ವೇಳೆ ಅನಸ್ಥೇಷಿಯಾ ನೀಡುವುದರ ಮೇಲೇ ಸೀಮಿತವಾಗಿಲ್ಲ; ಬದಲಾಗಿ ಪ್ರಸವ (labour) ಸಮಯದ ನೋವು ನಿವಾರಣೆ,, ಅಪಘಾತ/ಗಾಯಗಳ ಚಿಕಿತ್ಸೆ (trauma care), ಐಸಿಯು (Intensive Care) ನಿರ್ವಹಣೆ,, ಪ್ಯಾಲಿಯೇಟಿವ್ ಕೇರ್ (ಪರಿಹಾರಾತ್ಮಕ ಚಿಕಿತ್ಸಾ), ಇದರಲ್ಲಿ ಬಳಕೆಯಲ್ಲಿರುವ ಸಮಗ್ರ pain management ಕುರಿತಾಗಿ ಕೇಂದ್ರೀಕೃತವಾಗಿದೆ. MD ಅನಸ್ಥೇಷಿಯಾಲಜಿ (MD in Anesthesiology) ಎಂಬುದು 3 ವರ್ಷಗಳ ಸ್ನಾತಕೋತ್ತರ ವೈದ್ಯಕೀಯ ಪದವಿ ಕಾರ್ಯಕ್ರಮವಾಗಿದ್ದು, ವೈದ್ಯರಿಗೆ ಅನಸ್ಥೇಷಿಯಾ ನೀಡುವುದು, ನೋವು ನಿಯಂತ್ರಿಸುವುದು, ಮತ್ತು ಗಂಭೀರ/ತುರ್ತು ರೋಗಿಗಳನ್ನು ನಿರ್ವಹಿಸುವುದು ಇತ್ಯಾದಿ ಕ್ಷೇತ್ರಗಳಲ್ಲಿ ಸಂಪೂರ್ಣ ತರಬೇತಿಯನ್ನು ನೀಡುತ್ತದೆ. ಶಸ್ತ್ರಚಿಕಿತ್ಸೆ, ಐಸಿಯು, ತುರ್ತು ಚಿಕಿತ್ಸೆ, ಮತ್ತು ನೋವು ನಿರ್ವಹಣೆಯಲ್ಲಿ ಅನಸ್ಥೇಷಿಯ ತಜ್ಞರ ಪಾತ್ರ ಅತಿ ಜೀವಾವಶ್ಯಕವಾದುದರಿಂದ, ಇದು ಇಂದಿನ ದಿನಗಳಲ್ಲಿ ಅತ್ಯಂತ ಬೇಡಿಕೆಯ ವೈದ್ಯಕೀಯ ವಿಶೇಷೀಕರಣಗಳಲ್ಲಿ ಒಂದಾಗಿದೆ. ಪ್ರಸವದ ಸಮಯದ ನೋವು ನಿವಾರಣೆ ಗರ್ಭಿಣಿಯರಿಗೆ ಲೇಬರ್ ಪೇನ್ನ್ನು ಕಡಿಮೆ ಮಾಡುವ ತುರ್ತು ಸಿಸೆಕ್ಷನ್ಗಳಲ್ಲಿ ನೀಡುವುದು ಅಪಘಾತ ಮತ್ತು ಟ್ರಾಮಾ ನಿರ್ವಹಣೆ ಬಹಳ ಗಂಭೀರ ಗಾಯಗೊಂಡ ರೋಗಿಗಳಿಗೆ ತುರ್ತು ಅನಸ್ಥೇಷಿಯಾಅನಸ್ಥೇಷಿಯ ತಜ್ಞರು ವೈದ್ಯಕೀಯ ಕ್ಷೇತ್ರದ ಮೈಮುಚ್ಚಿದ ಹೀರೋಗಳು ಎಂದು ಕರೆಯಲ್ಪಡುತ್ತಾರೆ, ಏಕೆಂದರೆ: ಶಸ್ತ್ರಚಿಕಿತ್ಸೆ ಆರಂಭವಾಗುವ ಮೊದಲಿಗರಿಂದ ಕೊನೆಯವರೆಗೂ ರೋಗಿಯ ಜೀವಪರ್ಯಂತ ಜವಾಬ್ದಾರಿ ಇವರದಾಗಿರುತ್ತದೆ.ರೋಗಿಯ ಹೃದಯ, ಉಸಿರಾಟ, ರಕ್ತದ ಒತ್ತಡ, ಆಮ್ಲಜನಕ ಮಟ್ಟ ಇವೆಲ್ಲವನ್ನೂ ನಿರಂತರವಾಗಿ ಗಮನಿಸುತ್ತಾರೆ.ಶಸ್ತ್ರಚಿಕಿತ್ಸೆಯಲ್ಲಿ ಯಾವಾಗಲಾದರೂ ತುರ್ತು ಸಮಸ್ಯೆ ಉಂಟಾದರೆ, ಮೊದಲು intervention ಮಾಡುವವರು. ರೋಗಿ ಭಯವಿಲ್ಲದೆ, ನೋವಿಲ್ಲದೆ ಮತ್ತು ಸುರಕ್ಷಿತವಾಗಿ ಶಸ್ತ್ರಚಿಕಿತ್ಸೆ ಅನುಭವಿಸುವಂತೆ ಮಾಡುವ ಪ್ರಮುಖ ವ್ಯಕ್ತಿ "ಅನಸ್ಥೇಷಿಯಾಲಜಿಸ್ಟ್". ರಾಯಚೂರಿನಲ್ಲಿ, ನವೋದಯ ವೈದ್ಯಕೀಯ ಕಾಲೇಜು (NMC) ಮತ್ತು ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ (RIMS) ನಲ್ಲಿ ಅರಿವಳಿಕೆ ಶಾಸ್ತ್ರದಲ್ಲಿ M.D. ಪದವಿ ಪಡೆಯಬಹುದು.

## ಶ್ರೀ ಸೂಗುರೇಶ್ವರ ಜಾತ್ರಾ ಮಹೋತ್ಸವ, ಜೋಡು ರಥೋತ್ಸವದಲ್ಲಿ ಶಾಸಕರು ಭಾಗಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ದೇವಸೂಗುರ ಗ್ರಾಮದ ಆರಾಧ್ಯ ದೈವ ಕ್ಷೇತ್ರಾಧಿಪತಿ ಶ್ರೀ ಸೂಗುರೇಶ್ವರ ಜಾತ್ರಾ ಮಹೋತ್ಸವ ಹಾಗೂ ಜೋಡು ರಥೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಬಸನಗೌಡ ದದ್ದಲ್ ಅವರು ಭಾಗಿಯಾಗಿ ದೇವರ ಆಶೀರ್ವಾದ ಪಡೆದರು.**




ನವೆಂಬರ್ 26ರಂದು ನಡೆದ ಜಾತ್ರೋತ್ಸವದಲ್ಲಿ ಭಾಗಿಯಾದ ಶಾಸಕರು ಮಾತನಾಡಿ, ಶ್ರೀ ಸೂಗೂರೇಶ್ವರರ ಜೋಡು ರಥೋತ್ಸವವು ಅದ್ದೂರಿಯಾಗಿ ಶಾಂತಿಯುತವಾಗಿ ವಿಜೃಂಭಣೆಯಿಂದ ಜರುಗಲು ಸಹಕರಿಸಿದ ದೇವಸುಗೂರು ಸೇರಿದಂತೆ ಸುತ್ತಲಿನ ಎಲ್ಲ ಗ್ರಾಮಸ್ಥರಿಗೆ ವಂದನೆಗಳು ತಿಳಿಸುವೆ. ಶ್ರೀ ಸೂಗೂರೇಶ್ವರರ ಆಶೀರ್ವಾದವು ನಮ್ಮೆಲ್ಲರ ಮೇಲೆ ಸದಾಕಾಲ ಇರಲಿ. ಗ್ರಾಮದ, ಜಿಲ್ಲೆಯ, ರಾಜ್ಯದ, ದೇಶದ ಎಲ್ಲ ಜನತೆಗೆ ಸದಾಕಾಲ ಒಳಿತು ಮಾಡಲಿ ಎಂದು ಪ್ರಾರ್ಥಿಸಿದ್ದೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಮುಖಂಡರು, ಪೊಲೀಸ್ ಸೇರಿದಂತೆ, ಕಂದಾಯ, ಆರೋಗ್ಯ ಇಲಾಖೆ ಮತ್ತು ಇನ್ನೀತರ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಇನ್ನೀತರರು ಇದ್ದರು.

# ಸಂವಿಧಾನದಿಂದ ಸಮಾನತೆ, ಸಾಮಾಜಿಕ ನ್ಯಾಯ: ನಿತೀಶ್ ಕೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ನವೆಂಬರ್ 26 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನವೆಂಬರ್ 26ರಂದು ಸಂವಿಧಾನ ದಿನಾಚರಣೆ ಕಾರ್ಯಕ್ರಮ ನಡೆಯಿತು. ಬೆಳಗ್ಗೆ, ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಸಂವಿಧಾನ ಜಾಗೃತಿ ಜಾಥಾ ಆರಂಭವಾಯಿತು.**

ಇದೆ ಸಂದರ್ಭದಲ್ಲಿ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್, ರಾಯಚೂರು ನಗರ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕಾಧ್ಯಕ್ಷರಾದ ಪವನ ಕಿಶೋರ್ ಪಾಟೀಲ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ ಕಾಂದೂ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ತಹಸೀಲ್ದಾರ ಸುರೇಶ ವರ್ಮಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ನಾಗೇಂದ್ರ ಮಠಮಾರಿ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು. ಇದೇ ವೇಳೆ, ಸಂವಿಧಾನ ಪೀಠಿಕೆಯನ್ನು ಓದಿದರು. ಬಳಿಕ ಜಾಥಾವು, ಬಸವೇಶ್ವರ ವೃತ್ತ, ಚಂದ್ರಮೌಳೇಶ್ವರ ವೃತ್ತ, ತೀನ್ ಕಂದಿಲ್ ವೃತ್ತ, ತಹಸೀಲ್ದಾರ ಕಚೇರಿ, ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ನಗರದ ಶ್ರೀ ಪಂಡಿತ್ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರಕ್ಕೆ ಬಂದು ಸೇರಿತು. ಜಾಥಾದಲ್ಲಿ ಭಾಗಿಯಾಗಿದ್ದ ವಿವಿಧ ಸಂಘಟನೆಗಳು ಪದಾಧಿಕಾರಿಗಳು, ನಾಗರಿಕರು, ಮಹಿಳೆಯರು, ವಿವಿಧ ಶಾಲಾ ಕಾಲೇಜುಗಳ ಮತ್ತು ವಸತಿ ನಿಲಯಗಳ ವಿದ್ಯಾರ್ಥಿಗಳು ಸಂವಿಧಾನ ಜಾಗೃತಿಯ ಫಲಕ, ಸಂವಿಧಾನ ಪುಸ್ತಕ, ರಾಷ್ಟ್ರಧ್ವಜ ಹಿಡಿದು ಸಾಲಾಗಿ ಜಾಥಾದ ಮೆರುಗು ಹೆಚ್ಚಿಸಿದರು. ಬಳಿಕ, ಜಿಲ್ಲಾ ರಂಗಮಂದಿರದಲ್ಲಿ ನಡೆದ ವೇದಿಕೆಯ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ನಿತೀಶ್ ಕೆ



ಅವರು ಉದ್ಘಾಟಿಸಿ ಮಾತನಾಡಿ, ನ್ಯಾಯ ಮತ್ತು ಸಮಾನತೆಯ ಆಶಯ ಹೊಂದಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರು ಸರ್ವರಿಗು ಸಮಬಾಳು ಎನ್ನುವ ಸಾಮಾಜಿಕ ನ್ಯಾಯದ ಪರಿಕಲ್ಪನೆಯೊಂದಿಗೆ ದೇಶದ ಜನತೆಗೆ ಸಮಾನತೆಯನ್ನು ಮತ್ತು ನ್ಯಾಯ ಕೊಡಲು ಮಹತ್ವದ ಸಂವಿಧಾನ ರಚಿಸಿ ದೇಶದ ಜನತೆಗೆ ಸಮರ್ಪಿಸಿರುವುದು ಅತ್ಯಂತ ಮಹತ್ವದ ಕಾರ್ಯವಾಗಿದೆ ಎಂದು ತಿಳಿಸಿದರು. ಸಮಾಜದಲ್ಲಿನ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು, ಪರಿಹರಿಸಲು ನಾವುಗಳು ಕೈಗೊಂಡ ಹಾಗೂ ಕೈಗೊಳ್ಳಬೇಕಾದ ಕಾರ್ಯಗಳಿಗೆ ಸಂವಿಧಾನವು ದಿಕ್ಸೂಚಿಯಾಗಿದೆ. ಸಂವಿಧಾನದಿಂದಾಗಿ ಸಮಾಜದಲ್ಲಿನ ಪ್ರತಿಯೊಬ್ಬರಿಗೂ ಹಂತ ಹಂತವಾಗಿ ಸಮಾನವಕಾಶಗಳು ದೊರಕುತ್ತ ಸಮಾಜವು ಬದಲಾವಣೆಯತ್ತ ಸಾಗುತ್ತಿದೆ. ಮಹಿಳೆಯರು ಸಹ ಪ್ರತಿಯೊಂದು ರಂಗದಲ್ಲಿ ಸಾಧನೆ ತೋರುತ್ತಿದ್ದಾರೆ ಎಂದು ತಿಳಿಸಿದರು. ಹಟ್ಟಿ ಚಿನ್ನದ ಗಣಿ ಕಂಪನಿಯ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಜಿಲ್ಲಾ ನೌಕರರ ಸಂಘದ ಅಧ್ಯಕ್ಷರಾದ ಶ್ರೀಕೃಷ್ಣ ಶಾವಂತಗೇರಿ ಅವರು ಮಾತನಾಡಿ, ಭಾರತ ದೇಶವು ಹಲವು ಧರ್ಮಗಳ ನಾಡಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ತರುವಲ್ಲಿ ಸಂವಿಧಾನವು ನಮಗೆ ಮಾರ್ಗತೋರಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನಮಗೆ ಉತ್ತಮವಾದ ದಾರಿ ತೋರಿದ್ದಾರೆ. ಸದೃಢ ದೇಶ ನಿರ್ಮಾಣವು ಸಂವಿಧಾನದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಸುಭಾಷ್ ಚಂದ್ರ ಅವರು ವಿಶೇಷ ಉಪನ್ಯಾಸ ನೀಡಿ, ದೇಶದ ಸ್ವಾತಂತ್ರ?ಯಕ್ಕಾಗಿ ಹಲವಾರು ನಾಯಕರು ಹೋರಾಟ ಮಾಡುತ್ತಿದ್ದಾಗ ಡಾ.ಬಿ.ಆರ್. ಅಂಬೇಡ್ಕರ್ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗುವುದರ ಜೊತೆಗೆ ಸಮಾಜ ಸುಧಾರಣೆಯ ಗಣ ಕಾರ್ಯಕೈಗೊಂಡರು. ಜಾತಿ, ಮತ, ಮೂಢನಂಬಿಕೆ, ಕಂದಾಚಾರದಿಂದ ನರಳುತ್ತಿದ್ದ ಸಮಾಜವನ್ನು ಕಂಡು ಇವುಗಳನ್ನು ಸಂಪೂರ್ಣ ನಿರ್ಮೂಲನೆಯಾಗಲೇಬೇಕು ಎಂದು ಸಂವಿಧಾನ ರಚಿಸಿ ಅದರ ಶ್ರೇಷ್ಠತೆಯನ್ನು ತಿಳಿಸಿಕೊಟ್ಟರು. ಆ ಸಮಾಜ, ಈ ಸಮಾಜ ಎನ್ನದೇ ಎಲ್ಲ ಸಮಾಜದವರು ಮೀಸಲು ಸೌಲಭ್ಯ ಪಡೆದು ಮುಂದೆ ಬರಲು ಡಾ.ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದ ಮಾತ್ರ ಸಾಧ್ಯವಾಗಿದೆ. ಸಂವಿಧಾನವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಅದರಿಂದ ಸಮಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬರು ಸಂವಿಧಾನದ ಓದುವುದರ ಜೊತೆಗೆ ಪ್ರತಿಯೊಬ್ಬರ ಮನೆಯಲ್ಲೂ ಸಹ ಸಂವಿಧಾನದ ಪೀಠಿಕೆ, ಭಾವಚಿತ್ರವನ್ನು ಒಳಗೊಳ್ಳುವುದು ಸೂಕ್ತವಾಗಿದೆ ಎಂದು ತಿಳಿಸಿದರು. ಸಂವಿಧಾನವು ನಮ್ಮ ಭಾರತ ದೇಶದ ಪವಿತ್ರ ಗ್ರಂಥವಾಗಿದೆ. ಸಮಾಜದಲ್ಲಿ ಉತ್ತಮ ಬದುಕು ರೂಪಿಸಿಕೊಳ್ಳಲು ಸಂವಿಧಾನವು ನಮಗೆ ಸಹಕಾರಿಯಾಗಿದೆ. ಹಗಲು ರಾತ್ರಿ ಲೆಕ್ಕಿಸದೆ ಶ್ರಮಪಟ್ಟು ಸಾವಿರಾರು ಪುಟಗಳ ಸಂವಿಧಾನವನ್ನು ಸಿದ್ಧಗೊಳಿಸಿದ ಕೀರ್ತಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದರು.

ಅಸಮಾನತೆಯು ನಮ್ಮ ದೇಶದಲ್ಲಿ ಇನ್ನು ಸಹ ನೆಲೆಯೂರಿದೆ. ಅಸಮಾನತೆಯನ್ನು ಅಳಿಸಲು ನಾವು ಮನುಷ್ಯರನ್ನು ಮನುಷ್ಯರಂತೆಯೇ ಕಾಣಬೇಕಿದೆ. ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಅವರು ರಚಿಸಿದ ಸಂವಿಧಾನವು ಕೇವಲ ಒಂದೇ ಸಮುದಾಯಕ್ಕೆ ಸೀಮಿತವಾಗಿಲ್ಲ ಎಂಬುದನ್ನು ನಾವೆಲ್ಲರೂ ಮೊದಲು ಅರಿಯಬೇಕು. ಸಂವಿಧಾನವು ನ್ಯಾಯವಾದಿಗಳ ಸ್ವತ್ತು ಎಂದು ಭಾವಿಸದೇ, ಅದು ಎಲ್ಲರ ಸ್ವತ್ತು, ಸಂವಿಧಾನವು ಸದಾಕಾಲ ಚೈತನ್ಯವಾಗಿದೆ ಎಂಬುದನ್ನು ತಿಳಿಯಬೇಕು. ಸಂವಿಧಾನದ ಬಗ್ಗೆ ಬರೀ ಮಾತನಾಡದೇ, ಭಾಷಣ ಮಾಡದೇ ಮನೆಮನೆಗೆ ತೆರಳಿ ಅದರ ಅರಿವು ಮತ್ತು ಮನವರಿಕೆ ಮಾಡಿಕೊಡುವ ಕಾರ್ಯ ಆಗಬೇಕಿದೆ ಎಂದು ಅವರು ಸಲಹೆ ಮಾಡಿದರು.

ಗಮನ ಸೆಳೆದ ಜಾನ್‌ವೆಸ್ಲಿ: ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮುಖಂಡರು ಮತ್ತು ಹೋರಾಟಗಾರರಾದ ಜಾನ್‌ವೆಸ್ಲಿ ಟಿ ಕಾತರಕಿ ಅವರು ಡಾ.ಬಿ.ಆರ್. ಅಂಬೇಡ್ಕರ್ ವೇಷ ಧರಿಸಿ ಗಮನ ಸೆಳೆದರು.

ಅಂಬೇಡ್ಕರ್ ಗೀತೆಗಳ ಗಾಯನ: ಸಮತಾ ಸೈನಿಕ ದಳದ ಜಿಲ್ಲಾಧ್ಯಕ್ಷರು ಹಾಗೂ ಕಲಾವಿದರಾದ ಪರಶುರಾಮ ಅರೋಲಿ ಅವರು ಕಾರ್ಯಕ್ರಮದಲ್ಲಿ ಪ್ರಾರ್ಥಿಸಿ, ಅಂಬೇಡ್ಕರ್ ಗೀತೆಗಳ ಗಾಯನ ನಡೆಸಿಕೊಟ್ಟರು. ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಕೆ.ಇ.ಕುಮಾರ, ಎಂ.ಆರ್.ಭೇರಿ, ಅನಿತಾ ನವಲಕಲ್, ನಿವೇದಿತಾ ಎನ್, ವಿಶ್ವನಾಥ ಪಟ್ಟಿ, ಬಸವರಾಜ ಸಾಸಲಮರಿ, ಗಿರಿಯಪ್ಪ ನೆಲಹಾಳ, ಕರುಣಕುಮಾರ ಕಟ್ಟಿಮನಿ, ಪಿ.ಪ್ರಭಾಕರ, ಪ್ರಾಣೇಶ ಮಂಚಾಳ, ರವಿ ದಾದಸ, ಎಂ ವೆಂಕಟೇಶ್ ಅರೋಲಿಕರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಸಿಂಧೂ ರಘು ಹೆಚ್.ಎಸ್., ಆದಿ ಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ರಾಜೇಂದ್ರ ಜಲ್ದಾರ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಿವಮಾನಪ್ಪ ಸೇರಿದಂತೆ ಇನ್ನೀತರರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ವಿವಿಧ ಶಾಲಾ ಕಾಲೇಜುಗಳ, ವಸತಿ ನಿಲಯಗಳ ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮಹಿಳೆಯರು, ವಿವಿಧ

# ನೋಬಲ್ ಟೆಕ್ನೋ ಶಾಲೆ ಪ್ರಜಾಪ್ರಭುತ್ವದ ಮೌಲ್ಯಕ್ಕೆ ಬದ್ಧವಾದ ವಿದ್ಯಾಸಂಸ್ಥೆ: ಸೈಯದ್ ತನವೀರ್



ನೈಜ್ಯ ದೆಸೆ ನ್ಯೂಸ್

**ಭಾರತ ಸಂವಿಧಾನ ದಿನದ ಅಂಗವಾಗಿ ಬುಧವಾರ ನೋಬಲ್ ಟೆಕ್ನೋ ಶಾಲೆಯಲ್ಲಿ ಸಂವಿಧಾನ ದಿನವನ್ನು ಗೌರವಪೂರ್ಣವಾಗಿ ಆಚರಿಸಲಾಯಿತು. ಶಾಲೆಯ ಮ್ಯಾನೇಜ್ಮೆಂಟ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಒಗ್ಗೂಡಿ ಭಾರತ ಸಂವಿಧಾನದ ಪ್ರಸ್ತಾವಿಕೆಯನ್ನು ಓದಿ ಪ್ರತಿಜ್ಞೆ ಮಾಡಿದರು.**

ಈ ಕಾರ್ಯಕ್ರಮದಲ್ಲಿ ಎಲ್ಲರೂ ಸಂವಿಧಾನದ ತತ್ವಗಳನ್ನು ಜೀವನದಲ್ಲಿ ಅನುಸರಿಸುವುದಾಗಿ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಬಾಂಧವ್ಯ ಮೌಲ್ಯಗಳನ್ನು ಕಾಪಾಡುವುದಾಗಿ ಪ್ರತಿಜ್ಞೆ ಮಾಡಿದರು. ನಂತರ ಶಾಲೆಯ ಆಡಳಿತಧಿಕಾರಿ ಸೈಯದ್ ತನವೀರ್ ಮಾತನಾಡಿ, ದೇಶದ ಪ್ರತಿಯೊಬ್ಬ ನಾಗರಿಕನು ಸಂವಿಧಾನದ ಮೌಲ್ಯಗಳನ್ನು ತಿಳಿದು, ಅವನ್ನು ದಿನನಿತ್ಯದ ನಡೆ?ನುಡಿಯಲ್ಲಿ ಅಳವಡಿಸಿಕೊಳ್ಳಬೇಕು ನಮ್ಮ ನೋಬಲ್ ಟೆಕ್ನೋ ಶಾಲೆಯು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧವಾದ ವಿದ್ಯಾಸಂಸ್ಥೆಯಾಗಿದೆ.

ಈ ಸಂವಿಧಾನವು ನಮ್ಮ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ತಿಳಿಸುವ ಮಹತ್ವದ ದಸ್ತಾವೇಜು ಎಂದು ಒತ್ತಿಹೇಳಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಜ್ಞೆಯನ್ನು ಮಾಡಿಸಿ, ಶಿಕ್ಷಕರು ವಿದ್ಯಾರ್ಥಿಗಳಿಗೆ ಸಂವಿಧಾನ ಓದುವುದು ಕೇವಲ ಆಚರಣೆ ಅಲ್ಲ, ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳುವ ದಾರಿಯ ಮೊದಲ ಹೆಜ್ಜೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಇಂದು ಪಡೆದ ಪ್ರೇರಣೆಯಿಂದ ದೇಶದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡುವುದಾಗಿ ಹಾಗೂ ಸಂವಿಧಾನದ ಗೌರವವನ್ನು ಉಳಿಸುವುದಾಗಿ ಸಂಕಲ್ಪವನ್ನೂ ವ್ಯಕ್ತಪಡಿಸಿದರು ಎಂದು ಶಾಲೆಯ ಮುಖ್ಯೋಪಾಧ್ಯಾಯನಿ ಶಾಜಿಯ ಪತ್ರಿಕೆಗೆ ಮಾಹಿತಿಯನ್ನು ನೀಡಿದರು.

# ತುಂಗಭದ್ರಾ ನೀರಾವರಿ ಕಾರ್ಮಿಕರ ವೇತನ ಪಾವತಿಗೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಗಂಗಾವತಿ: ಕರ್ನಾಟಕ ನೀರಾವರಿ ನಿಗಮಕ್ಕೆ ಸೇರಿದ ತುಂಗಭದ್ರಾ ನೀರಾವರಿ ಕಾರ್ಮಿಕರಿಗೆ ಐದು ತಿಂಗಳಿಂದ ಬಾಕಿ ಇರುವ ವೇತನವನ್ನು ತಕ್ಷಣ ಪಾವತಿಸುವಂತೆ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (AICCTU) ಕೇಂದ್ರ ಸಮಿತಿ ಅಧಿಕಾರಿಗಳಲ್ಲಿ ಮನವಿ ಸಲ್ಲಿಸಿದೆ.**

ಕಾರ್ಮಿಕರು ಕಾಲುವೆ ಮತ್ತು ಕಛೇರಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಬಾಕಿ ವೇತನ



ಪಾವತಿಸಲಾಗದಿರುವುದರಿಂದ ದೈನಂದಿನ ಅಗತ್ಯ ವಸ್ತುಗಳ ಖರೀದಿ, ಕುಟುಂಬದ ವೈದ್ಯಕೀಯ ಚಿಕಿತ್ಸೆಗಾಗಿ ಸಾಲಕ್ಕೆ ಹೋದಂತೆ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಸಂಘದವರ ಮನವಿ, ಟೆಂಡರ್ ನಿಯಮಾವಳಿಯಂತೆ ತಕ್ಷಣವೇ ವೇತನ ಪಾವತಿಸಬೇಕು, ಬಾಕಿ ವೇತನದ ಮೇಲೆ ಬಡ್ಡಿ ಸೇರಿಸಬೇಕು ಮತ್ತು ಇಎಸ್ಐ, ಇಪಿಎಫ್ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಕೂಡ ಒದಗಿಸಬೇಕು ಎಂದು ಒತ್ತಾಯಿಸಲಾಗಿದೆ.

1936 ರ ವೇತನ ಪಾವತಿ ಕಾಯ್ದೆಯ ಸೆಕ್ಷನ್ 5 ಪ್ರಕಾರ ಪ್ರತಿ ತಿಂಗಳ 7ನೇ ತಾರೀಖಿನೊಳಗೆ ವೇತನ ಪಾವತಿಸಬೇಕು. ಆದರೆ ಕಳೆದ ಐದು ತಿಂಗಳು ಕಾರ್ಮಿಕರಿಗೆ ವೇತನ ಪಾವತಿಸಲಾಗಿಲ್ಲ. ಸಂಘವು ಸಂಬಂಧಿತ ಗುತ್ತಿಗೆದಾರ ಮತ್ತು ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ. ಈ ಸಂದರ್ಭದಲ್ಲಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ವಡ್ಡರಟ್ಟಿ ಕ್ಯಾಂಪ್ ಉಪ ವಿಭಾಗದ ಅಧ್ಯಕ್ಷ ಶರಣಬಸವ ಹೇರೂರು, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಪಾಟೀಲ ತಿಪ್ಪನಾಳ, ಸಂಘಟನಾ ಕಾರ್ಯದರ್ಶಿ ಚಾಂದ್ ಪಾಷಾ ಉಪಸ್ಥಿತರಿದ್ದರು.

# ಸನ್ ರೈಸ್ ಕಾಲೇಜಿನಲ್ಲಿ ಪ್ಯಾರಮೆಡಿಕಲ್ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ :ಮೌನೇಶ್ ಸಾಲವಾಡಗಿ ಅವರಿಂದ ಉದ್ಘಾಟನೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರಿನ ಸನ್‌ರೈಸ್ ಡಿ ಫಾರ್ಮಸಿ , ನರ್ಸಿಂಗ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ತೃತೀಯ ವರ್ಷದ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗೆ ಭವ್ಯವಾದ ಬೀಳ್ಕೊಡುಗೆ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ. ಅತ್ತಾರ್ ಅವರು ವಹಿಸಿದರು.**

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಮೌನೇಶ್ ಸಾಲವಾಡಗಿ ಜಿಲ್ಲಾ ಅಧ್ಯಕ್ಷರು ವಿಶ್ವಕರ್ಮ ಸಮಾಜ ರಾಯಚೂರು ಇವರು ಮತ್ತು ವೀರೇಶ್ ವಿಶ್ವಕರ್ಮ ಸಮಾಜದ ಜಿಲ್ಲಾ ಯುವ ಘಟಕ ಅಧ್ಯಕ್ಷರು ಹಾಗೂ ವೇದಿಕೆ ಮೇಲೆ ಇರುವ ಎಲ್ಲರೂ ಸೇರಿ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು ಮೌನೇಶ ಸಾಲವಾಡಗಿ ರವರು ಮಾತನಾಡಿ ಪಾರಾಮೆಡಿಕಲ್ ವಿದ್ಯಾಭ್ಯಾಸ ಪೂರ್ಣಗೊಳಿಸಿ ಹೊರಡುತ್ತಿರುವ ನಿಮ್ಮೆಲ್ಲರೂ ಜೀವನದಲ್ಲಿ ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕು. ನೀವು ಆಯ್ಕೆ ಮಾಡಿರುವ ಕೋರ್ಸ್ ನಿಮಗೆ ಅತ್ಯುತ್ತಮ ಉದ್ಯೋಗಗಳನ್ನು ನೀಡುತ್ತವೆ ಆದ್ದರಿಂದ ನೀವುಗಳು ತಮ್ಮ ಸಂಸ್ಥೆಯಿಂದ ಉತ್ತಮ ಫಲಿತಾಂಶವನ್ನು ತೆಗೆದುಕೊಂಡು ಉತ್ತಮ ಉದ್ಯೋಗವನ್ನು ತೆಗೆದುಕೊಂಡು ತಮ್ಮ ವಿದ್ಯಾಭ್ಯಾಸ



ಮುಗಿಸಿದ ಕಾಲೇಜು ಮತ್ತು ನಿಮ್ಮ ತಂದೆ ತಾಯಿಯ ಹೆಸರಿಗೆ ಕೀರ್ತಿ ತರಬೇಕು ಎಂದು ತಿಳಿಸಿದರು.

ಮತ್ತು ಲಾಜರ್ ಸಿರಿಲ್ ಜಿ ಅವರು ಪ್ರಾಸ್ತಾವಿಕ ಭಾಷಣದಲ್ಲಿ ಸಂವಿಧಾನದ ಕುರಿತು ಹಾಗೂ ಬಿ ಆರ್ ಅಂಬೇಡ್ಕರ್ ಅವರ ಶ್ರಮದ ಫಲ ಸಂವಿಧಾನ ಇಂದು ನಾವು ನೀವು ಸಮಾಜದಲ್ಲಿ ಘನತೆ ಗೌರವ ಉದ್ಯೋಗ ಶಿಕ್ಷಣದ ಸೌಲಭ್ಯವನ್ನು ಪಡೆದು ಸಮ ಸಮಾಜದಲ್ಲಿ ಬೇಧ ಭಾವ ಇಲ್ಲದೆ ಜೀವಿಸಲು ಅವಕಾಶ ಕಲ್ಪಿಸಿದೆ ಎಂದು ತಿಳಿಸಿದರು ತೃತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಕುರಿತು ಮಾತನಾಡಿ ಮೂರು ವರ್ಷದ ಕೆಳಗೆ ಸಾಮಾನ್ಯ ವಿದ್ಯಾರ್ಥಿಗಳಾಗಿ ಸೇರಿ ಇಂದು ಕೌಶಲ್ಯಭರಿತ ವಿದ್ಯಾರ್ಥಿಗಳಾಗಿ ವೃತ್ತಿಪರ ಘನತೆಯೊಂದಿಗೆ ಹೊರಜಗತ್ತಿಗೆ ಸಾಗುತ್ತಿದ್ದೀರಿ ನಿಮ್ಮ ವೃತ್ತಿ ಪರತೆಯಲ್ಲಿ ನಿಮ್ಮ ಕೌಶಲ್ಯವೇ ನಿಮ್ಮ ಬುನಾದಿಯಾಗಲಿ ಎಂದು ತಿಳಿಸಿದರು.

ಉಪನ್ಯಾಸಕರಾದ ಆಶುಪಾಷಾ ಅವರು ಮಾತನಾಡಿ ಪ್ರಸಿದ್ಧ ಪತ್ರಕರ್ತ ರವಿ ಬೆಳೆಗೆರೆ ಅವರ ಮಾತನ್ನು ಉಲ್ಲೇಖಿಸಿ ದುಡ್ಡು ಮಾಡುತ್ತೇನೆಂದು ಹೋಗಬೇಡಿ, ಹೆಸರು ಮಾಡುತ್ತೇನೆ ಎಂದು ಹೋಗಬೇಡಿ,

ಕೆಲಸ ಮಾಡುತ್ತೇನೆ ಎಂದು ಹೋಗಿ, ಮಾಡುವ ಕೆಲಸವನ್ನು ಶ್ರದ್ಧೆ ಮತ್ತು ನಿಷ್ಠೆ ಹಾಗೂ ಸಮಯ ಪ್ರಜ್ಞೆಯತೆಯನ್ನು ಕಾಪಾಡಿಕೊಳ್ಳಿ ಹಾಗೂ ಮಾಡುವ ಕೆಲಸದಲ್ಲಿ ದೇವರನ್ನು ಕಾಣಿ,ಆಗ ನಿಮ್ಮ ಕೆಲಸದ ಜೊತೆಗೆ ದುಡ್ಡು, ಹೆಸರು ತಾನಾಗಿಯೇ ಬರುತ್ತದೆ ಅಂದು ತಿಳಿಸುತ್ತಾ ನಿಮ್ಮ ವಿದ್ಯಾಭ್ಯಾಸವನ್ನು ಇಲ್ಲಿಗೆ ಮೊಟಕುಗೊಳಿಸದೆ ಇನ್ನೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸೇರಿ ಜ್ಞಾನ ವೃದ್ಧಿಸಿಕೊಳ್ಳಿ ಎಂದು ತಿಳಿಸಿದರು , ಅಧ್ಯಕ್ಷೀಯ ಭಾಷಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ. ಅತ್ತಾರ್ ಮಾತನಾಡಿ, ಒಬ್ಬ ಪ್ಯಾರಮೆಡಿಕಲ್ ವಿದ್ಯಾರ್ಥಿ ಜೀವನದಲ್ಲಿ ಅನುಸರಿಸಬೇಕಾದ ಶಿಸ್ತು, ಸೇವಾಭಾವ ಮತ್ತು ಮನುಷ್ಯತ್ವವೇ ಅವರ ನಿಜವಾದ ಶಕ್ತಿ. ವಿದ್ಯಾರ್ಥಿಗಳು ಈ ಮೌಲ್ಯಗಳನ್ನು ಜೀವನಪೂರ್ತಿ ಪಾಲಿಸಬೇಕು," ಎಂದು ಸಲಹೆ ನೀಡಿದರು ಮತ್ತು ಸಂವಿಧಾನದ ಕರಡು ಸಮಿತಿಯ ಸದಸ್ಯರುಗಳ ಹೆಸರನ್ನು ಉಲ್ಲೇಖಿಸಿ ಅವರ ಘಮನೀಯ ಸಂವಿಧಾನದ ಕೊಡುಗೆಯ ಬಗ್ಗೆ ಸ್ಮರಿಸಿದರು. ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ನೃತ್ಯ ರೂಪಕದ ಮೂಲಕ ಸಂವಿಧಾನದ ಜಾಗೃತಿ ಡಾ ಬಿ ಆರ್ ಅಂಬೇಡ್ಕರ್ ಅವರ ಸ್ಮರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಇರ್ಷಾದ್ ಕೆ. ಅತ್ತಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ತಿಳಿಸಿದರು. ನಂತರ ತೃತೀಯ ವರ್ಷದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ನಂತರ ಮಧ್ಯಾಹ್ನ ಪ್ರೀತಿಯ ಭೋಜನ ಏರ್ಪಡಿಸಲಾಗಿದ್ದು, ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ವಿದ್ಯಾರ್ಥಿಗಳು ನೀಡಿದ ಮನಮೋಹಕ ಸಾಂಸ್ಕೃತಿಕ ಪ್ರದರ್ಶನದಿಂದ ಕಾರ್ಯಕ್ರಮ ಮನರಂಜನೆಗೊಳಿಸಿ ಯಶಸ್ವಿಯಾಗಿ ಮುಗಿಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅತ್ತಾರ್ ರವರು ಮತ್ತು ಕಾರ್ಯದರ್ಶಿಗಳಾದ ಇರ್ಷಾದ್ ಕೆ, ಪ್ಯಾರಾ ಮೆಡಿಕಲ್ ಪ್ರಾಂಶುಪಾಲರಾದ ಚಕ್ರವರ್ತಿ,ನರ್ಸಿಂಗ್ ವಿಭಾಗದ ಪ್ರಾಂಶುಪಾಲರಾದ ಸಿರಿಲ್ ಜಿ, ಫಾರ್ಮಸಿ ಪ್ರಾಂಶುಪಾಲರಾದ ವಸಿಂ ಹುಸೇನ್ ಹಾಗೂ ಎಲ್ಲ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿ ಉಪಸ್ಥಿತರಿದ್ದರು.

# ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸಂವಿಧಾನ ಸಮರ್ಪಣಾ ದಿನ ಆಚರಣೆ




**ನೈಜ್ಯ ದೆಸೆ ನ್ಯೂಸ್**

ಸ್ವಾಮಿ ವಿವೇಕಾನಂದ ಗ್ರೂಪ್ ಆಫ್ ಇನ್ಸಿಟ್ಯೂಷನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ಡಿ ಫಾರ್ಮಾಸಿ & ಬಿ ಫಾರ್ಮರ್ಸಿ ಕಾಲೇಜ್ , ಪ್ಯಾರ ಮೆಡಿಕಲ್ ಕಾಲೇಜ್, ನರ್ಸಿಂಗ್ ಕಾಲೇಜ್ ಲಿಂಗಸ್ಗೂರಿನಲ್ಲಿ ಸಂವಿಧಾನ ದಿನಾಚರಣೆಯನ್ನು ಆಚರಣೆ ಮಾಡಲಾಯಿತು




**ನೈಜ್ಯ ದೆಸೆ ನ್ಯೂಸ್**

ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿ ರಾಯಚೂರ ಜಿಲ್ಲಾ ಘಟಕ ವತಿಯಿಂದ ಸಂವಿಧಾನ ಸಮರ್ಪಣಾ ದಿನ ಆಚರಣೆ




**ನೈಜ್ಯ ದೆಸೆ ನ್ಯೂಸ್**

ಸರಕಾರಿ ಪ್ರಥಮ ದರ್ಜೆ ಕಾಲೇಜ ಮುದುಗಲ್‌ನಲ್ಲಿ ಸಂವಿಧಾನ ಸಮರ್ಪಣಾ ದಿನ ಆಚರಣೆ



**ನೈಜ್ಯ ದೆಸೆ ನ್ಯೂಸ್**

ಮಾಡಲ್ ಹಿರಿಯ ಪ್ರಾಥಮಿಕ ಶಾಲೆ ಕವಿತಾಳದಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆಯನ್ನು ಆಚರಣೆ ಮಾಡಲಾಯಿತು



**ನೈಜ್ಯ ದೆಸೆ ನ್ಯೂಸ್**

ಫೆಡರಲ್ ಶಿಕ್ಷಣ ಸಂಸ್ಥೆ ರಾಯಚೂರಿನಲ್ಲಿ ಸಂವಿಧಾನ ದಿನಾಚರಣೆ ಆಚರಿಸಲಾಯಿತು.




**ನೈಜ್ಯ ದೆಸೆ ನ್ಯೂಸ್**

ಸಿರವಾರ ಪಟ್ಟಣದ ಜ್ಞಾನಗಂಗಾ ಶಾಲೆಯಲ್ಲಿ ಸಂವಿದಾನ ದಿನದ ಆಚರಣೆಯನ್ನು ಮಾಡಲಾಯಿತು.



**ನೈಜ್ಯ ದೆಸೆ ನ್ಯೂಸ್**

ಸಹನಾ ಶಾಲೆ ಮುದಗಲ್ ಸಂವಿಧಾನ ದಿನಾಚರಣೆ.

ಮುದಗಲ್ ಪಟ್ಟಣದ ಕಿಲ್ಲಾದಲ್ಲಿರುವ ಸಹನಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಡಾ. ಬಿ.ಆರ್ ಅಂಬೇಡ್ಕರ್ ಹಾಗೂ ಸಂವಿಧಾನ ಪೀಠಿಕೆ ಭಾವಚಿತ್ರಕ್ಕೆ ಶಾಲಾ ಶಿಕ್ಷಕಿಯರಾದ ನಿಲುಬಾಯಿ ಮತ್ತು ಕವಿತಾ ಪೂಜೆ ಸಲ್ಲಿಸುವುದರ ಮೂಲಕ ಚಾಲನೆ ನೀಡಲಾಯಿತು. ಶಾಲೆಯ ಮುಖ್ಯ ಗುರುಗಳಾದ ಆದಪ್ಪ ಸರ್ ಅವರು ಸಂವಿಧಾನ ಪೀಠಿಕೆಯನ್ನು ಮಕ್ಕಳಿಂದ ಓದಿಸಿದರು. ನಂತರದಲ್ಲಿ ಭಾರತದ ಸಂವಿಧಾನದ ಬಗ್ಗೆ ಶಾಲೆಯ ಶಿಕ್ಷಕಿಯರಾದ ಕಾವೇರಿ, ಪ್ರಿಯಾಂಕ ಮಾತನಾಡಿದರು. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಯಾದ ಆಯೇಶಾ ಬಾನು ನಿರೂಪಿಸಿದರು. ನಂತರದಲ್ಲಿ ಮಕ್ಕಳಿಗೆ ಸಿಹಿ ಹಂಚಲಾಯಿತು.



**ನೈಜ್ಯ ದೆಸೆ ನ್ಯೂಸ್**

ಮಾನವಿಯ ವೆಂಕಟೇಶ್ವರ ಕಾಲೇಜಿನಲ್ಲಿ ಸಂವಿಧಾನ ದಿನಾಚರಣೆ ಮಾಡುತ್ತಾ ಪೂರ್ವ ಪೀಠಿಕೆ ಪ್ರತಿಜ್ಞೆ ಸ್ವೀಕರಿಸಲಾಯಿತು.



**ನೈಜ್ಯ ದೆಸೆ ನ್ಯೂಸ್**

ಬಳಗಾನೂರು : ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಂವಿಧಾನ ದಿನ ಆಚರಿಸಲಾಯಿತು

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸಂವಿಧಾನ ಸಮರ್ಪಣಾ ದಿನ ಆಚರಣೆ




**ನೈಜ್ಯ ದೆಸೆ ನ್ಯೂಸ್**

ಎಸ್. ಎಂ. ಎಸ್. ಇಂಟರ್‌ನ್ಯಾಷನಲ್ ಮಾಂಟೆಸರಿ ಆಂಗ್ಲ ಮಾಧ್ಯಮ ಶಾಲೆ ದೇವದುರ್ಗ



**ನೈಜ್ಯ ದೆಸೆ ನ್ಯೂಸ್**

ಸಿಂಧನೂರು : ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸಂವಿಧಾನ ದಿನ ಆಚರಿಸಲಾಯಿತು




**ನೈಜ್ಯ ದೆಸೆ ನ್ಯೂಸ್**

ನಗರ ಆರೋಗ್ಯ ಕೇಂದ್ರ ಸಿಂಧನೂರು : ಸಂವಿಧಾನ ದಿನ ಆಚರಿಸಲಾಯಿತು



**ನೈಜ್ಯ ದೆಸೆ ನ್ಯೂಸ್**

ಬಳಗಾನೂರ : ಸರಕಾರಿ ಪ್ರೌಢ ಶಾಲೆಯಲ್ಲಿ ಸಂವಿಧಾನ ದಿನಾಚರಣೆ ಆಚರಿಸಿದ ಕ್ಷಣ




**ನೈಜ್ಯ ದೆಸೆ ನ್ಯೂಸ್**

ಬಳಗಾನೂರ : ಶ್ರೀ ಮರಿ ಬಸವಲಿಂಗೇಶ್ವರ(ಅನುದಾನಿತ) ಕನ್ನಡ ಶಾಲೆಯಲ್ಲಿ ಸಂವಿಧಾನ ದಿನಾಚರಣೆ ಆಚರಿಸಿ ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆಯನ್ನು ಪ್ರತಿಜ್ಞೆ ಮಾಡಿಸಲಾಯಿತು



**ನೈಜ್ಯ ದೆಸೆ ನ್ಯೂಸ್**

ಬಳಗಾನೂರು : ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯಲ್ಲಿ ಭಾರತದ ಸಂವಿಧಾನ ದಿನಾಚರಣೆ ಆಚರಿಸಿದ ಕ್ಷಣ




**ನೈಜ್ಯ ದೆಸೆ ನ್ಯೂಸ್**

ತಾಲೂಕ ಸಾರ್ವಜನಿಕ ಆಸ್ಪತ್ರೆ ಸಿಂಧನೂರಿನಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.



**ನೈಜ್ಯ ದೆಸೆ ನ್ಯೂಸ್**

ಕಾರಟಗಿಯ ಅಗ್ನಿಶಾಮಕ ಠಾಣೆಯಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆ.




**ನೈಜ್ಯ ದೆಸೆ ನ್ಯೂಸ್**

ಸಿಂಧನೂರು : ಕೇಂದ್ರೀಯ ವಿದ್ಯಾಲಯ ಸಿಂಧನೂರಿನಲ್ಲಿ ಸಂವಿಧಾನ ದಿನಾಚರಣೆಯನ್ನು ಆಚರಿಸಿ ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.




**ನೈಜ್ಯ ದೆಸೆ ನ್ಯೂಸ್**

ಸಹಾಯಕ ನಿರ್ದೇಶಕರು ಗ್ರೇಡ್ –2 ಸಮಾಜ ಕಲ್ಯಾಣ ಇಲಾಖೆ ಸಿಂಧನೂರು ಸಂವಿಧಾನ ದಿನಾಚರಣೆಗೆ 1 ಆಚರಿಸಲಾಯಿತು

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101